ಕರ್ನಾಟಕ ವಿಧಾನಸಭೆ

ಶುಕ್ರವಾರ 30ನೇ ಮಾರ್ಚ್ 2001ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 9.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ ರವರು)

ಪೀಠವನ್ನು ಅಲಂಕರಿಸಿದ್ದರು.

1. ವಿತ್ತೀಯ ಕಾರ್ಯಕಲಾಪ

(ಅ) 2001-2002ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ:

+ ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು): ಮಾನ್ಯ ಅಧ್ಯಕ್ಷರೆ, 2001-2002ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ ಮಾಡಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಪ್ರಥಮವಾಗಿ ತಮಗೆ ವಂದಿಸಿ ಬಹಳ ಪ್ರಮುಖವಾದ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲಿಚ್ಚಿಸುತ್ತೇನೆ. ನಿಗದಿತ ದಿವಸದಲ್ಲಿ ಸದನ ಕರೆಯುತ್ತಿಲ್ಲ, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಚರ್ಚೆ ನಡೆಯುತ್ತಿಲ್ಲ. ಇದು ಕೆಟ್ಟ ಸಂಪ್ರದಾಯವಾಗಿದ್ದು ಕಳೆದ 12 ವರ್ಷಗಳಿಂದ ಇದು ಹೀಗೆಯೇ ನಡೆಯುತ್ತಿದೆ. ಇದಕ್ಕೆ ಮಾನ್ಯ ಸಂಸದೀಯ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಪೂರ್ಣ ವಿರಾಮ ಹಾಕದಿದ್ದರೆ ಮುಂದೆ ಬರತಕ್ಕಂಥ ದಿನಗಳಲ್ಲಿ ಮಾರ್ಚ್ 30ನೇ ತಾರೀಖು ಬಜೆಟ್ ಮಂಡನೆ ಮಾಡಿ 31ನೇ ತಾರೀಖು ಅಪ್ರೂವಲ್ ಆಗಬೇಕಂಥ ದಿನಗಳು ದೂರವಿಲ್ಲ. ಪಾರ್ಲಿಮೆಂಟ್‌ನಲ್ಲಿ ಫೆಬ್ರವರಿ 28ನೇ ತಾರೀಖು ಬಜೆಟ್ ಮಂಡನೆ ಆಗಲೇಬೇಕು. ಅದೇ ರೀತಿ ನಮ್ಮ ರಾಜ್ಯದಲ್ಲಿ ಕೂಡ ಇಂಥ ನಿಗದಿತ ದಿವಸ ಬಜೆಟ್ ಮಂಡನೆ ಆಗಬೇಕು, ಇಷ್ಟು ದಿವಸ ಇದರ ಬಗ್ಗೆ ಚರ್ಚೆ ಆಗಲೇಬೇಕು ಎನ್ನುವುದನ್ನು ನಿಗದಿ ಮಾಡದಿದ್ದರೆ ನಾನು ಮೊದಲೇ ಹೇಳಿದ ಪ್ರಕಾರ ಈ ಸದನವನ್ನು ಬಹಳ ಅವಸರವಾಗಿ ತೆಗೆದುಕೊಳ್ಳತಕ್ಕಂಥ ದಿವಸಗಳು ಬಹಳ ದೂರ ಇಲ್ಲ. ಆದ್ದರಿಂದ ನಿಗದಿತ ದಿವಸಗಳಲ್ಲಿ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಮತ್ತು ಬಜೆಟ್ ಮಂಡನೆ ಬಗ್ಗೆ ಬಹಳಷ್ಟು ಸದಸ್ಯರು ಸಾಕಷ್ಟು ಚರ್ಚೆ ಮಾಡುವ ಸಲುವಾಗಿ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು 19 ಮತ್ತು 177ಕ್ಕೆ ತಿದ್ದುಪಡಿ ತರಬೇಕೆಂದು ಮಾನ್ಯ ಸಂಸದೀಯ ಸಚಿವರಲ್ಲಿ ನಾನು ಆಗ್ರಹ ಮಾಡುತ್ತೇನೆ. ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ - ಸದನದಲ್ಲಿ ಭಾಷಣ ಮಾಡಲಿಕ್ಕೆ, ಚರ್ಚೆ ಮಾಡಲಿಕ್ಕೆ ಬಹಳಷ್ಟು ಮಾನ್ಯ ಸದಸ್ಯರುಗಳಿಗೆ ಅವಕಾಶ ಇಲ್ಲ. ದಯಮಾಡಿ ನಿಯಮ 19 ಮತ್ತು 177ನ್ನು ತಿದ್ದುಪಡಿ ಮಾಡಿ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅನಿಸಿಕೆಗಳನ್ನು ಒಂದೆರಡು ಪುಟಗಳಲ್ಲಿ ಲಿಖಿತ ರೂಪದಲ್ಲಿ ಕ್ರೋಢೀಕರಣ ಮಾಡಿ ಅದನ್ನು ಸದನದಲ್ಲಿ ರಿಟನ್ ಸ್ಪೀಚ್ ಎಂದು ಸರ್ಕಾರಕ್ಕೆ ಸಬ್‌ಮಿಟ್ ಮಾಡುವ ಅವಕಾಶವನ್ನು ಕಲ್ಪಿಸಲಿಕ್ಕೆ ಸಾಧ್ಯವೇ ಎಂಬುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು.

ಅಧ್ಯಕ್ಷರು : ಇದು ಬಹಳ ಒಳ್ಳೆಯ ಸಲಹೆಯಾಗಿದೆ.

ಶ್ರೀ ಕೆ.ಬಿ. **ಮಲ್ಲಿಕಾರ್ಜುನ** : ಇವರ ಬಗ್ಗೆ ವಿಷಯಮಾಡಿ ಸಂಸದೀಯ ಸಚಿವರು ಯೋಚನೆ ಮಾಡಿ ಮಾಡಬೇಕೆನ್ನುವುದು ನನ್ನ ಮೊದಲ ಅಭಿಪ್ರಾಯವಾಗಿದೆ. ಎರಡನೆಯದಾಗಿ, ಸದನವನ್ನು ಸರ್ಕಾರ ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದೆ. ಅನೇಕ ವಿಷಯಗಳು ಸದನದಲ್ಲಿ ಪ್ರಸ್ತಾಪವಾಗುತ್ತವೆ. ಯಾವ ವಿಷಯಕ್ಕೂ ಸಹಿತ ಸರ್ಕಾರದಿಂದ ಸ್ಪಷ್ಟವಾಗಿರತಕ್ಕಂಥ ಉತ್ತರ ಬರುತ್ತಿಲ್ಲವೆನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಭಾಷಣವನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ಕೋರ್ಟ್‌ನಲ್ಲಿ, ಕೋರ್ಟಿನ ನ್ಯಾಯಾಧೀಶರುಗಳು ಯಾವ ರೀತಿಯಲ್ಲಿ ನಮ್ಮ ಶಾಸಕರನ್ನು ಅಪಹೇಳನ ಮಾಡುತ್ತಿದ್ದಾರೆ ಎನ್ನುವುದನ್ನು ಹಿರಿಯ ಸದಸ್ಯರಾದ ಮಾನ್ಯ ವೈ.ಕೆ. ರಾಮಯ್ಯನವರು ಪ್ರಸ್ತಾಪ ಮಾಡಿದರು. ಮತ್ತು ಇದರ ಬಗ್ಗೆ ವ್ಯಾಪಕವಾದ ಚರ್ಚೆ ನಡೆಯಿತು. ಆ ಸಂದರ್ಭದಲ್ಲಿ ಕಡೂರಿನಲ್ಲಿ ಕೋರ್ಟ್ ಈ ತಿಂಗಳ ಕೊನೆಯಲ್ಲಿ ಅಥವಾ ಮುಂದಿನ ತಿಂಗಳ ಅವಧಿಯಲ್ಲಿ ಉದ್ಘಾಟನೆಯಾಗುತ್ತದೆ. ಅದಕ್ಕೆ ಸರ್ಕಾರದಿಂದ ತಡೆಯನ್ನು ಕೊಡಬೇಕು ಎಂದು ನಾನೂ ಸಹಿತ ಮಾನ್ಯ ಸಂಸದೀಯ ಸಚಿವರಿಗೆ ಆಗ್ರಹ ಮಾಡಿದೆ. ಕೋರ್ಟ್‌ನವರು ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ ಜಿಲ್ಲೆಯ ಮಂತ್ರಿಗಳನ್ನು ಸಹಿತ ಆಹ್ವಾನ ಮಾಡಬಾರದು ಎನ್ನತಕ್ಕಂಥ ಆದೇಶವನ್ನು ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಜಡ್ಜ್ ಕೊಟ್ಟಿರುವಂಥ ಆದೇಶವನ್ನು ತಮ್ಮ ಮೂಲಕ ಮಾನ್ಯ ಕಾನೂನು ಸಚಿವರಿಗೆ ಕೊಡುತ್ತಿದ್ದೇನೆ. ಈ ಕೋರ್ಟ್‌ಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆದಂಥ ಸಂದರ್ಭದಲ್ಲಿ ಮಾನ್ಯ ಸಂಸದೀಯ ಸಚಿವರು ಮಾತನಾಡುತ್ತಾ- "ಮಾನ್ಯ ಮುಖ್ಯಮಂತ್ರಿಗಳು ಮತ್ತು ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಚರ್ಚೆ ಮಾಡಿ ಇದಕ್ಕೆ ಒಂದು ಅಂತಿಮವಾಗಿರತಕ್ಕಂಥ ತೀರ್ಮಾನವನ್ನು ಈ ಸದನದ ಅಧಿವೇಶನ ಮುಗಿಯುವುದರೊಳಗಾಗಿ ಹೇಳುತ್ತೇನೆ ಎಂದು ಹೇಳಿದ್ದರು. ಆದರೆ ಇಲ್ಲಿಯವರೆಗೆ ಸದರಿ ವಿಷಯದಲ್ಲಿ ಅವರಿಂದ ಯಾವುದೇ ಉತ್ತರ ಬಂದಿಲ್ಲ. ಕಡೂರು ಕೋರ್ಟ್ 7-04-2001 ರಂದು ಪ್ರಾರಂಭವಾಗುತ್ತದೆ. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗುತ್ತದೆ ಎಂದು ನಾವು ಹೇಳಿದೆವು. ಮಳವಳ್ಳಿಯಲ್ಲಿ ಈಗಾಗಲೇ ಕೋರ್ಟಿನ ಉದ್ಘಾಟನೆ ಮಾಡಿದ್ದಾರಂತೆ. ಪ್ರಧಾನ ಜಿಲ್ಲಾ ನ್ಯಾಯಾಧೀಶರ ಆದೇಶದಲ್ಲಿ ಮುಖ್ಯಮಂತ್ರಿಗಳು, ಕಾನೂನು ಸಚಿವರು ಮತ್ತು ಒಬ್ಬ ಜಿಲ್ಲಾ ಮಂತ್ರಿಗಳು ಮಾತ್ರ ಇರಬೇಕೆಂದು ಇದೆ. ಇದರ ಜೊತೆಗೆ ಆಯಾ ಕ್ಷೇತ್ರದ ಸಂಬಂಧಪಟ್ಟ ಶಾಸಕರೂ ಕೂಡ ಇರಬೇಕೆಂಬುದು ನನ್ನ ಒತ್ತಾಯ. ಎಂ.ಎಲ್.ಎ. ಅಥವಾ ಎಂ.ಪಿ. ಬಂದರೆ ಫಸ್ಟ್ ರೋಲ್‌ನಲ್ಲಿ ಅವರಿಗೆ ಸೀಟ್ ಅಲಾಟ್‌ಮೆಂಟ್ ಮಾಡಬೇಕು. ಡಿಸ್ಟ್ರಿಕ್ಟ್ ಜಡ್ಜ್ ಫೋನ್ ಮೂಲಕ ಇನ್‌ವೈಟ್ ಮಾಡಬೇಕು. ಆಕಸ್ಮಿಕವಾಗಿ ಅವರಿಗೆ ಅನಿಸಿಕೆ ಬಂದರೆ ಒಂದು ವಾರ ಆದ ಮೇಲೆ ಸೌಜನ್ಯತೆಗೆ ಕರೆದು ಟೀ ಕೊಡಬೇಕು ಎನ್ನತಕ್ಕಂಥ ಒಂದು ಆರ್ಡರನ್ನು ಹೊರಡಿಸಿರತಕ್ಕಂಥದ್ದನ್ನು ತಮ್ಮ ಗಮನಕ್ಕೆ ತಂದಿದ್ದೆ. ಆ ಆದೇಶವನ್ನು ಇವತ್ತು ತಮ್ಮ ಮೂಲಕ ಮಾನ್ಯ ಸಂಸದೀಯ ಸಚಿವರಿಗೆ ಕೊಡುತ್ತೇನೆ. ಇದರ ಬಗ್ಗೆ ಸರ್ಕಾರದಿಂದ ಉತ್ತರ ಬರದಿದ್ದರೆ ಸಾರ್ವಜನಿಕರಲ್ಲಿ ಏನು ಅಭಿಪ್ರಾಯ ಬರುತ್ತದೆ ಎಂದರೆ, ಏನೋ ಭಾಷಣ ಮಾಡುತ್ತಾರೆ, ಅದು ಅಲ್ಲಿಗೇ ನಿಂತುಹೋಗುತ್ತದೆ, ಯಾರಿಗೆ ಏನು ಆಗುತ್ತದೋ ನೋಡಿಕೊಳ್ಳೋಣ ಎನ್ನುವ

ಭಾವನೆಗಳು ಅಧಿಕಾರಿಗಳಿಗೆ, ಸಾರ್ವಜನಿಕರಿಗೆ ಬರುತ್ತದೆ. ಹಾಗಾಗಿ ಈ ಮೂಲಕ ಸರ್ಕಾರ ನನಗೆ ರಕ್ಷಣೆಯನ್ನು ಕೊಡಬೇಕೆಂದು ನನ್ನ ಕೋರಿಕೆ. ಇನ್ನು ಅನೇಕ ಭ್ರಷ್ಟಾಚಾರದ ವಿಷಯಗಳನ್ನು ನಾವು ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಮುಖ್ಯವಾಗಿ ಜಿಲ್ಲೆಯಲ್ಲಿನ ಸಮಸ್ಯೆಯಾದ ಫಿನಾಯಿಲ್ ಮತ್ತು ಬ್ಲೀಚಿಂಗ್ ಪೌಡರ್‌ನ ವಿಚಾರವಾಗಿ ಮಾತನಾಡಿದ್ದೆ. ಸನ್ಮಾನ್ಯ ಸಂಸದೀಯ ಸಚಿವರು ನಮ್ಮ ಜಿಲ್ಲೆಯಲ್ಲಿ ನಡೆಯುವ ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಪ್ರಿಸೈಡ್ ಮಾಡಿದ್ದರು. 12-02-2001ನೇ ಇಸವಿಯಲ್ಲಿ ಡಿ.ಸಿ. ಯವರು ರಿಪೋರ್ಟ್ ಕೊಡಬೇಕೆಂದಿದೆ. ಇಲ್ಲಿಯವರೆಗೂ ಆದೇಶ ಹೊರಡಿಸಿಲ್ಲ, ಇಲ್ಲಿಯವರೆಗೂ ಆ ರಿಪೋರ್ಟ್ ಬಂದಿಲ್ಲ. ಈ ರೀತಿಯಾದರೆ ನಾವು ವಿಷಯವನ್ನು ಪ್ರಸ್ತಾಪ ಮಾಡಿ ಜನಗಳ ದೃಷ್ಟಿಯಲ್ಲಿ ಅಪಹಾಸ್ಯಕ್ಕೆ ಈಡಾಗತಕ್ಕಂಥ ವಾತಾವರಣ ನಿರ್ಮಾಣವಾಗುತ್ತಿದೆ. ಅದಕ್ಕೋಸ್ಕರ ಇನ್ನೂ ನಾಲ್ಕಾರು ವಿಷಯಗಳು ಇದ್ದರೂ ಸಹ ಇವೆರಡು ಸೂಕ್ಷ್ಮವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇದಕ್ಕೆ ಅಂತಿಮವಾಗಿರತಕ್ಕಂಥ ಸದನದಲ್ಲಿ ಹೇಳತಕ್ಕಂಥದ್ದಕ್ಕೆ ಶೀಘ್ರವಾಗಿರತಕ್ಕಂಥ ಪರಿಹಾರವನ್ನು ಕೊಡದೇ ಹೋದರೆ, ಇಂಥ ವಿಚಾರಗಳನ್ನು ಸದನ ಲಘುವಾಗಿ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ಜನರು ಮತ್ತು ಅಧಿಕಾರಿಗಳು ಹೇಳುತ್ತಾರೆ, ತಿಳಿದುಕೊಳ್ಳುತ್ತಾರೆ ಎನ್ನುವುದನ್ನು ಹೇಳುತ್ತೇನೆ. ಇನ್ನು ಆಯವ್ಯಯದ ಬಗ್ಗೆ ಹೇಳುವುದಾದರೆ ಕಳೆದ ವರ್ಷದ ಆಯವ್ಯಯ ಮತ್ತು ಈ ವರ್ಷದ ಆಯವ್ಯಯವನ್ನು ಓದಿದ್ದೇನೆ. ಇಂಪ್ಲಿಮೆಂಟ್ ಯಾವ ರೀತಿ ಆಗಿದೆ, ಯಾವುದು ಆಗಿಲ್ಲ ಬೇವು ಎಷ್ಟಿದೆ, ಬೆಲ್ಲ ಎಷ್ಟಿದೆ ಎನ್ನುವುದು ಮುಂದಿನ ವರ್ಷ ನಮಗೆ ಗೊತ್ತಾಗುತ್ತದೆ. 2000-2001 ಮತ್ತು 2001-2002ನೇ ಇಸವಿಗಳ ಬಜೆಟ್‌ನ ಪುಸ್ತಕವನ್ನು ಓದುತ್ತಿರತಕ್ಕಂಥ ಸಂದರ್ಭದಲ್ಲಿ ಒಂದು ವಿಷಯ ನನ್ನ ಗಮನಕ್ಕೆ ಬಂತು. ಸಾಲವನ್ನು, ಸಬ್ಸಿಡಿಯನ್ನು ವಿದೇಶಿ ನೆರವನ್ನು ಯಾವ ರೀತಿ ಪಡೆಯಬಹುದು ಎನ್ನುವುದಕ್ಕೆ ಇದು ಒಂದು ಒಳ್ಳೆಯ ಮಾರ್ಗಸೂಚಿ ಪುಸ್ತಕ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿರತಕ್ಕಂಥ 2-3 ಅಂಶಗಳನ್ನು ಇವತ್ತಿನ ದಿವಸ ಮೆಚ್ಚಬೇಕಾಗುತ್ತದೆ. ಪೂರ್ವ ದಿಕ್ಕಿನಲ್ಲಿ ಹರಿಯತಕ್ಕಂಥ ನೇತ್ರಾವತಿ ನದಿಯ 142 ಟಿ.ಎಂ.ಸಿ. ನೀರನ್ನು ನಮ್ಮ ಜಿಲ್ಲೆಗಳಿಗೆ ಹರಿಸತಕ್ಕಂಥ ಯೋಜನೆಗೆ ಈ ಬಜೆಟ್‌ನಲ್ಲಿ ಸರ್ಕಾರ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಕ್ಕಾಗಿ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ಮಾರುಕಟ್ಟೆಯನ್ನು ಒಂದೇ ಮಾರುಕಟ್ಟೆಯೆಂದು ಪರಿಗಣಿಸಿ ಮಲ್ಟಿ ಪಾಯಿಂಟ್ ಟಾಕ್ಸ್‌ನ್ನು ತೆಗೆದಿರುವುದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಅಡಿಕೆ ಮಾರಾಟದ ಮೇಲೆ ಇರತಕ್ಕಂಥ ಟಿ.ಒ.ಟಿ.ಯನ್ನು ರದ್ದು ಮಾಡಿರುವುದನ್ನು ಸ್ವಾಗತ ಮಾಡುತ್ತೇವೆ. ಸೂಕ್ತ ಆದಾಯ ತರುವ ಬಂಡವಾಳದ ವೆಚ್ಚಕ್ಕೆ ಮಾತ್ರ ಸಾಲವನ್ನು ಬಳಸುವುದು' ಎಂದು ಮಾನ್ಯ ಮುಖ್ಯಮಂತ್ರಿಗಳು ಬಹಳ ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಚಾಚೂತಪ್ಪದೆ ಇಂಪ್ಲಿಮೆಂಟ್ ಮಾಡಿದರೆ ಈ ರಾಜ್ಯ ಉದ್ಧಾರವಾಗುತ್ತದೆ. ಏನೂ ಆದಾಯ ಬರದಿರತಕ್ಕಂಥದ್ದಕ್ಕೆ ಅನೇಕ ಕಡೆ ಬಂಡವಾಳ ಹೂಡತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಇವತ್ತಿನ ದಿವಸ ನಬಾರ್ಡ್‌ನಿಂದ ಮತ್ತು ಇತರೆ ಕಡೆಯಿಂದ ಹಣವನ್ನು ಸಾಲವಾಗಿ ತಂದು ರಸ್ತೆಗಳಿಗೆ ಖರ್ಚು ಮಾಡುತ್ತಿದ್ದೇವೆ. ಕೆಲವೊಂದು ರಸ್ತೆಗಳಿಂದ ಲಾಭ ಬರುತ್ತಿಲ್ಲ. ಯಾವುತ್ತೋ ಲಾಭ ಬರುತ್ತದೆಂದು ಹೇಳಬಹುದು. ಕೆಲವೊಂದು ರಸ್ತೆಗಳಲ್ಲಿ ಹತ್ತು ಜನ ಸಹ ಓಡಾಡುವುದಕ್ಕೆ ತಯಾರಿಲ್ಲ, ಒಂದು ಲಾರಿ ಸಹಿತ ಓಡಾಡುವುದಿಲ್ಲ ಅಂಥ ರಸ್ತೆಗಳನ್ನು ನಬಾರ್ಡ್ ಯೋಜನೆಯಲ್ಲಿ ಸೇರಿಸಿರುವುದನ್ನು ನೋಡುತ್ತಿದ್ದೆವೇ ಇದಕ್ಕೋಸ್ಕರ

ಸ್ಪಷ್ಟವಾಗಿರತಕ್ಕಂಥ ಒಂದು ಮಾನದಂಡವನ್ನು ಸರ್ಕಾರದವರು ಕೊಡಬೇಕಾಗುತ್ತದೆ. ಸಾಲವಾಗಿ ತಂದಂಥ ಯಾವ ಯಾವ ಬಂಡವಾಳವನ್ನು ಯಾವ ಯಾವುದಕ್ಕೆ ವೆಚ್ಚ ಮಾಡಿದರೆ ಆದರಿಂದ ಆದಾಯ ಬರುತ್ತದೆ ಎನ್ನುವುದನ್ನು ಸ್ಪಷ್ಟಮಾಡಿಕೊಂಡು ಅಂಥವಕ್ಕೆ ಮಾತ್ರ ಸಾಲದ ಹಣವನ್ನು ಉಪಯೋಗಮಾಡಬೇಕು ಎನ್ನತಕ್ಕಂಥ ನಿರ್ಣಯವನ್ನು ಸರ್ಕಾರ ಏನು ತೆಗೆದುಕೊಂಡಿದೆ ಇದು ಚಾಚೂತಪ್ಪದೆ ಪಾಲಿಸಬೇಕೆಂದು ಹೇಳುತ್ತಾ, ಇದಕ್ಕೂ ಸಹ ನಾನು ಸ್ವಾಗತ ಕೋರುತ್ತೇನೆ. ಖಾಸಗೀ ಭೂಮಿಯಲ್ಲಿ ಶ್ರೀಗಂಧವನ್ನು ಬೆಳೆಯತಕ್ಕಂಥದ್ದಕ್ಕೆ ನಾನು ಸ್ವಾಗತವನ್ನು ಕೋರುತ್ತೇನೆ. ಇವತ್ತಿನ ದಿವಸ ಈ ಬಜೆಟ್‌ನಲ್ಲಿ ನಾಲ್ಕಾರು ಹೊಸ ಹೊಸ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ. ತತ್ಕಾಲ್ ಯೋಜನೆ, ನಿರ್ಮಲ ಜ್ಯೋತಿ ಯೋಜನೆ, ನವಗ್ರಾಮ ಯೋಜನೆ, ಸುರಕ್ಷ ಹೆರಿಗೆ, ಚಿಣ್ಣರ ಅಂಗಳ, ಜನ ಮೆಚ್ಚಿದ ಶಿಕ್ಷಕ, ದತ್ತು ಯೋಜನೆ, ಸರ್ವಶಿಕ್ಷ ಅಭಿಯಾನಾ, ಸಾಂತ್ವನ, "ನಮ್ಮ ಹಳ್ಳಿ ನಮ್ಮ ರಸ್ತೆ" ಯುವ ಚೇತನ, ವನ ವಿಕಾಸ ಯೋಜನೆ. ಈ ಯೋಜನೆಗಳೆಲ್ಲವೂ ಸಹಿತ ಹಿಂದೆ ನಮ್ಮ ರಾಜ್ಯದಲ್ಲಿ ಇತ್ತು. ಹಿಂದೆ ಪೀಪಲ್ಸ್ ಪಾರ್ಟಿಸಿಪೇಷನ್ ಪ್ರೋಗ್ರಾಂ ಇತ್ತು. 20 ಪರ್ಸಂಟ್ ಮತ್ತು 80 ಪರ್ಸಂಟ್ ಹಣ ಉಪಯೋಗಿಸಿಕೊಂಡು ರಸ್ತೆಗಳನ್ನು ಮಾಡಿಸಿಕೊಳ್ಳತಕ್ಕಂಥ ಯೋಜನೆ ಇತ್ತು. ಹಿಂದೆ ಇದರಲ್ಲಿ ಏನಾಗಿದೆ ಎನ್ನುವುದನ್ನು ನೋಡದೆಯೇ ಹೊಸ ಯೋಜನೆಗಳನ್ನು ಈಗ ಸರ್ಕಾರ ಪ್ರಾರಂಭಿಸಿದೆ. ಈ 'ನವ ಗ್ರಾಮ ಯೋಜನೆ' ಹಿಂದೆ ಕೂಡ ಇತ್ತು. ಶ್ರೀ ಬಂಗಾರಪ್ಪನವರು 1992ನೇ ಇಸವಿಯಲ್ಲಿ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಆಶ್ರಯ ಯೋಜನೆಯಲ್ಲಿ ಹೊಸ ಗ್ರಾಮಗಳನ್ನು ನಿರ್ಮಾಣ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಇದು ಇಂಪ್ಲಿಮೆಂಟ್ ಆಗಿದೆಯೋ ಅಥವಾ ಇಲ್ಲವೋ ಎನ್ನುವುದನ್ನು ನೋಡದೆಯೇ ಪುನಃ ಈಗ ನವ ಗ್ರಾಮ ಯೋಜನೆ ಎಂದು ಹೊಸದಾಗಿ ಮಾಡಿದ್ದಾರೆ. ಜನ ಮೆಚ್ಚಿದ ಶಿಕ್ಷಕ ಎನ್ನುವ ಯೋಜನೆಯನ್ನು ಕೇವಲ ಪ್ರಚಾರ ಪಡೆಯುವ ಸಲುವಾಗಿ ಮಾಡಿದ್ದಾರೆ. ಸ್ಲಂ ಬೋರ್ಡ್‌ನವರು ಏನು ಕೆಲಸ ಮಾಡಿದ್ದಾರೆ ಎಷ್ಟು ಹಣವನ್ನು ಖರ್ಚು ಮಾಡದೆ ಅನ್ಯಾಯ ಮಾಡಿದ್ದಾರೆ ಎನ್ನುವುದನ್ನು ಗಮನಿಸದೆಯೇ, ಇದರ ಬಗ್ಗೆ ಚರ್ಚೆಯಾಗದೆ ಈಗ 'ನಿರ್ಮಲ ಜ್ಯೋತಿ ಯೋಜನೆ' ಎಂದು ಹೊಸ ಯೋಜನೆಯನ್ನು ತಂದಿದ್ದಾರೆ. ಇಲ್ಲಿ ಹೆಸರುಗಳನ್ನು ಕೊಟ್ಟು ಪ್ರಚಾರವನ್ನು ಗಿಟ್ಟಿಸಿಕೊಳ್ಳುವುದಕ್ಕಿಂತ ಮೂಲವಾಗಿ ಹಿಂದಿನ ಆಯವ್ಯಯದಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಚರ್ಚೆ ಮಾಡುವುದು ಸೂಕ್ತ ಎನ್ನುವ ಮಾತನ್ನು ಹೇಳುತ್ತಾ, ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ತಿನ ಬಾಕಿ ಹಣವನ್ನು ನಾಲ್ಕು ತಿಂಗಳೊಳಗೆ ಅಂದರೆ ಏಪ್ರಿಲ್ 15, 2001 ರೊಳಗೆ ಕೊಡಬೇಕೆಂದು ಆದೇಶ ಮಾಡಿದ್ದಾರೆ. ಈ ನಾಲ್ಕು ತಿಂಗಳುಗಳಲ್ಲಿ ಯಾವುದೇ ರೈತರಿಗೆ ಬೆಳೆದಂಥ ಫಸಲು ಇರುವುದಿಲ್ಲ ಮತ್ತು ಇದ್ದಂಥ ಫಸಲಿಗೆ ಸರಿಯಾದ ಬೆಲೆಯೂ ಸಿಗುವುದಿಲ್ಲ. ದಯಮಾಡಿ ನಾಲ್ಕು ತಿಂಗಳ ಬದಲು ಕನಿಷ್ಟ 7 ರಿಂದ 8 ತಿಂಗಳಿಗೆ ಮುಂದುವರಿಸಬೇಕೆಂದು ಹೇಳುತ್ತಾ, ರೈತರಿಗೆ 2 ರಿಂದ 3 ಪರ್ಸಂಟ್ ಸಬ್ಸಿಡಿ ಸರ್ಕಾರ ಕೊಟ್ಟಿದೆ. ರೈತರಿಗಾಗಿ ತರತಕ್ಕಂಥ ಸಾಲದಲ್ಲಿ ಎರಡು ಪರ್ಸಂಟ್ ಹಣವನ್ನು ಡಿ.ಸಿ.ಸಿ. ಬ್ಯಾಂಕ್‌ಗಳು, ಅಪೆಕ್ಸ್ ಬ್ಯಾಂಕ್‌ಗಳು ಅಥವಾ ಸೊಸೈಟಿಗಳು ತುಂಬಬೇಕೆಂದು ಇದೆ. ನನ್ನ ಸಲಹೆ ಏನೆಂದರೆ, ನಬಾರ್ಡ್‌ನಿಂದ ಅಪೆಕ್ಸ್ ಬ್ಯಾಂಕ್‌ನವರು ಸಾಲ ತೆಗೆದುಕೊಳ್ಳಬೇಕಾದರೆ ಸರ್ಕಾರ ಅದಕ್ಕೆ ಗ್ಯಾರಂಟಿ ಕೊಡಬೇಕು. ಸರ್ಕಾರ ಗ್ಯಾರಂಟಿ ಕೊಡಲಿಕ್ಕೆ ಒಂದು ಪರ್ಸಂಟ್ ಹಣವನ್ನು ಅಪೆಕ್ಸ್ ಬ್ಯಾಂಕ್‌ನವರು ತುಂಬಬೇಕಾಗುತ್ತದೆ. ಅದನ್ನು ಸರ್ಕಾರದವರು ಕೈಬಿಟ್ಟರೆ ರೈತರಿಗೆ ಒಂದು

ಪರ್ಸಂಟ್ ಬಡ್ಡಿ ಉಳಿಯತಕ್ಕಂಥದ್ದು ಆಗುತ್ತದೆ. ಈ ಬಗ್ಗೆ ಬಾಕಿ ವಿಷಯಗಳನ್ನು ನಮ್ಮ ಹಿರಿಯ ಸದಸ್ಯರು ಮಾತನಾಡಿರುವುದರಿಂದ ಅದು ಒಂದನ್ನು ಸರ್ಕಾರ ಮಾಡಬೇಕೆಂದು ಆಗ್ರಹಪೂರ್ವಕವಾಗಿ ಕೇಳುತ್ತಾ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದ ಶ್ರೀ ಹಾರ್ನಳ್ಳಿ ರಾಮಸ್ವಾಮಿ ಅವರನ್ನು ಒಂದು ಸಲ ನಾನು ಭೇಟಿ ಮಾಡಿದ್ದೆ. ಅವರು ಮಾತನಾಡುತ್ತಾ - 'ಯಾವಾಗಲೂ ಆಡಳಿತ ಸುಧಾರಣೆ ಮೇಲಿನಿಂದ ಆಗಬೇಕು. ಮೂರನೇ ಮಹಡಿಯಿಂದ ಕಸ ಗುಡಿಸುತ್ತಾ ಬರಬೇಕು. ಮೂರನೇ ಮಹಡಿ ಕ್ಲೀನ್ ಆದರೆ ನಂತರ ಎರಡನೇ ಮಹಡಿ ಕ್ಲೀನ್ ಆಗುತ್ತದೆ ತದನಂತರ ಮೊದಲನೇ ಮಹಡಿ ಕ್ಲೀನ್ ಆಗುತ್ತದೆ. ಕೆಳಗಡೆಯಿಂದ ಕ್ಲೀನ್ ಮಾಡಿದರೆ ಮೇಲ್ಗಡೆಯವರನ್ನು ಮತ್ತೆ ಕ್ಲೀನ್ ಮಾಡಬೇಕಾದರೆ ಅದು ಕೆಳಗಡೆ ಬೀಳುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಅದನ್ನೇ ನಾನು ಇಲ್ಲಿ ಉಚ್ಚರಿಸುತ್ತೇನೆ. ಈ ಸರ್ಕಾರದಲ್ಲಿ 45 ಜನ ಮಂತ್ರಿಗಳು ಇದ್ದಾರೆ. ಅವರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹಿತ 10 ರಿಂದ 15 ಹಿರಿಯ ಮಂತ್ರಿಗಳು ಕಚೇರಿಯಲ್ಲಿ, ಮನೆಯಲ್ಲಿ ಸಿಗುತ್ತಾರೆ. ಉಳಿದ ಮಂತ್ರಿಗಳು ತಮ್ಮ ಕಛೇರಿ ತೆರೆಯುವುದಿಲ್ಲ, ಮನೆಯಲ್ಲಿ ಸಹ ಇರುವುದಿಲ್ಲ. ಅವರು ಎಲ್ಲಿರುತ್ತಾರೋ ಗೊತ್ತಿಲ್ಲ. ಆದ್ದರಿಂದ ಮೊದಲು ಆಡಳಿತ ಸುಧಾರಣೆ ಇಲ್ಲಿ ಮಾಡಬೇಕಾಗುತ್ತದೆ. ಅವರು ಮಂತ್ರಿಮಂಡಲದ ಸೈಜನ್ನು ಕಡಿಮೆ ಮಾಡುತ್ತಾರೋ ಅಥವಾ ಜಾಸ್ತಿ ಮಾಡುತ್ತಾರೋ ಗೊತ್ತಿಲ್ಲ. ಅದು ನನಗೆ ಸಂಬಂಧಿಸಿದ ವಿಷಯವಲ್ಲ. ನನಗೆ ಹಿರಿಯ ಸಚಿವರು ಸಿಗುತ್ತಾರೆ ಕಿರಿಯ ಸಚಿವರು ಸಿಗುವುದಿಲ್ಲ. ಹಾಗಾಗಿ ಮೊದಲು ಆಡಳಿತ ಸುಧಾರಣೆಯನ್ನು ವಿಧಾನಸೌಧದಲ್ಲಿ ಮಾಡಬೇಕೆನ್ನುವುದು ನನ್ನ ಆಗ್ರಹ. ಇನ್ನು ಆಡಳಿತ ವೆಚ್ಚವನ್ನು ಕಡಿಮೆ ಮಾಡುವ ವಿಚಾರ ಬಂದಾಗ ಡಿವಿಷನಲ್ ಕಮಿಷನರ್‌ರವರ ಕಛೇರಿ, ಅಸಿಸ್ಟೆಂಟ್ ಕಮಿಷನರ್ ರವರ ಕಛೇರಿ ತೋರಿಸುತ್ತಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಸದನದಲ್ಲಿರುವುದರಿಂದ ಅವರಿಗೆ ಸೇರಿದ ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂಭತ್ತು ಜನ ಡೈರೆಕ್ಟರುಗಳು ಇದ್ದಾರೆ. ಆ ಒಂಭತ್ತು ಜನ ಡೈರೆಕ್ಟರುಗಳು ಮಾಡತಕ್ಕಂಥ ಆರ್ಡರನ್ನು ಇಂಪ್ಲಿಮೆಂಟ್ ಮಾಡುವವರು ಜಿಲ್ಲೆಯಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಒಬ್ಬರೇ. ಆದ್ದರಿಂದ ಎಂ.ಎಸ್. ಬಿಲ್ಡಿಂಗ್ ಮತ್ತು ವಿಧಾನಸೌಧ ಕ್ಲೀನ್ ಆದರೆ, ಇಲ್ಲಿ ಆಡಳಿತ ಸುಧಾರಣೆ ಆಗಿಬಿಟ್ಟರೆ ಜಿಲ್ಲಾ ಹಂತದಲ್ಲಿ, ತಾಲ್ಲೂಕು ಹಂತದಲ್ಲಿ ನಾವು ಯಾರೂ ಏನೂ ಮಾಡಬೇಕಾಗಿಲ್ಲ. ಅದರಷ್ಟಕ್ಕೆ ಅದೇ ಆಡಳಿತ ಸುಧಾರಣೆ ಆಗುತ್ತದೆಂದು ಹೇಳುತ್ತಾ, ಇವತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಏನು ಮಾತನಾಡುತ್ತಿದ್ದಾರೆಂದರೆ, ರೈತರು ಬೆಳೆದಂಥ ಬೆಳೆಗೆ ಬೆಲೆ ಜಾಸ್ತಿಯಾದಾಗ ಸರ್ಕಾರಿ ನೌಕರರಿಗೆ ಸಂಬಳಸಾರಿಗೆಗಳನ್ನು ಜಾಸ್ತಿ ಮಾಡುತ್ತಾರೆ, ಇಲ್ಲದಿದ್ದರೆ ಅವರೆಲ್ಲಾ ಧರಣಿ ಹರತಾಳ ಇತ್ಯಾದಿ ಮಾಡುತ್ತಾರೆ. ಅದೇ ರೀತಿ ರೈತರು ಬೆಳೆದ ಫಸಲಿಗೆ ಬೆಲೆ ಕುಸಿದಾಗ ನೌಕರರಿಗೆಲ್ಲಾ ಕಡಿಮೆ ರೇಟ್‌ನಲ್ಲಿ ದವಸಧಾನ್ಯ ಇತ್ಯಾದಿ ಸಿಗುತ್ತದೆ. ಇಂಥ ಸಂದರ್ಭದಲ್ಲಿ ಸಂಬಳ ಸಾರಿಗೆ ಏಕೆ ಕಡಿಮೆ ಮಾಡಬಾರದೆಂದು ಹಳ್ಳಿಯ ಜನ ಮಾತನಾಡಿಕೊಳ್ಳುತ್ತಿದ್ದಾರೆ. ರೈತರ ಫಸಲಿಗೆ ಬೆಲೆ ಏರಿದಾಗ ಟಿ.ಎ., ಡಿ.ಎ., ಜಾಸ್ತಿ ಮಾಡಬೇಕೆಂದು ಆಗ್ರಹ ಮಾಡತಕ್ಕಂಥ ಎರಡು ಪರ್ಸಂಟ್ ನೌಕರರು ಏನಿದ್ದಾರೆ ಹಾಗೆಯೇ 98 ಪರ್ಸಂಟ್ ಜನಗಳು ಬೆಳೆಯತಕ್ಕಂಥ ಫಸಲಿನ ಬೆಲೆ ಕಡಿಮೆ ಆದಾಗ ಏತಕ್ಕೋಸ್ಕರ ಸಂಬಳ ಕಡಿಮೆ ಮಾಡಬಾರದು ಎನ್ನುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಬೆಲೆ ಏರಿದಾಗ ಸಂಬಳ ಜಾಸ್ತಿ ಮಾಡುವುದು ಬೆಲೆ ಇಳಿದಾಗ

ಸಂಬಳ ಕಡಿಮೆ ಮಾಡತಕ್ಕಂಥದ್ದು ಸರ್ಕಾರದಿಂದ ಆಗಬೇಕು. ಈ ರೀತಿಯ ಪದ್ಧತಿ ಒಂದು ದೇಶದಲ್ಲಿ ಇದೆ. ಅದರ ಉದಾಹರಣೆ ಕೊಡಲಿಕ್ಕೆ ಸಮಯಾಭಾವದಿಂದ ಆಗುವುದಿಲ್ಲ. ಇನ್ನು ಪುಸ್ತಕಕ್ಕೆ ಹಾಕಿರತಕ್ಕಂಥ ತೆರಿಗೆ ಮತ್ತು ಬಿಯರ್‌ನ್ನು ಅಂಗಡಿಯಲ್ಲಿ ಮಾರುವುದಕ್ಕೆ ಅವಕಾಶ ಕೊಟ್ಟಿರುವುದನ್ನು ತೆಗೆದುಹಾಕುವ ತೀರ್ಮಾನವಾಗಿದೆ ಎಂದು ಕೇಳಿದ್ದೇನೆ. ಆಕಸ್ಮಾತ್ತಾಗಿ ದಿನಸಿ ಅಂಗಡಿಗಳಲ್ಲಿ ಬಿಯರ್ ಮಾರಾಟ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದನ್ನು ಪಾಪಸ್ಸು ತೆಗೆದುಕೊಳ್ಳದಿದ್ದರೆ ಏಪ್ರಿಲ್ 2ನೇ ತಾರೀಖಿನಿಂದ ಅಂಗಡಿಯವರು ಏನು ಮಾಡುತ್ತಾರೆಂದರೆ - 1000 ರೂಪಾಯಿಗಳ ದಿನಸಿ ತೆಗೆದುಕೊಂಡರೆ 2 ಬಾಟ್ಲ್ ಬಿಯರ್ ಉಚಿತ ಎನ್ನತಕ್ಕಂಥ ಬೋರ್ಡ್‌ಗಳನ್ನು ಎಲ್ಲಾ ಕಡೆ ಹಾಕಿರುತ್ತಾರೆ. ಹಾಗಾಗಿ ಕುಡಿತಕ್ಕೆ ಸರ್ಕಾರದವರೇ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ ಎನ್ನುವ ನೋವನ್ನು ಹೇಳುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ಈ ಬಜೆಟ್‌ನ ಪ್ರಸ್ತಾವನೆಗಳ ಕುರಿತಾಗಿ ಚಿಂತನೆ ಮಾಡುವಂಥ ಸಂದರ್ಭದಲ್ಲಿ ಉತ್ತರ ಕರ್ನಾಟಕದ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಮಾತನಾಡುವುದು ಅವಶ್ಯವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಉತ್ತರ ಕರ್ನಾಟಕ ಭಾಗದಿಂದ ಬಂದಂಥ ಒಬ್ಬ ಶಾಸಕನಾಗಿದ್ದೇನೆ. ಹಿಂದಿನ ಎಲ್ಲಾ ಸರ್ಕಾರಗಳು ಉತ್ತರ ಕರ್ನಾಟಕವನ್ನು ನಿರ್ಲಕ್ಷ್ಯ ಮಾಡುತ್ತಾ ಬಂದಿವೆ, ಆ ಭಾಗದಲ್ಲಿ ಅಭಿವೃದ್ಧಿ ಕುಂಠಿತಗೊಂಡಿದೆ ಎನ್ನುವ ಆರೋಪ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಈ ಸರ್ಕಾರ ಬಂದ ನಂತರ ಪ್ರಥಮ ಬಾರಿಗೆ ಉತ್ತರ ಕರ್ನಾಟಕದ ಬಗ್ಗೆ ಚಿಂತನೆ ಮಾಡುವಂಥ ಒಂದು ಪ್ರಸ್ತಾವನೆಯನ್ನು ಮುಂದಿಟ್ಟು, ಕಳೆದ ವರ್ಷದ ಬಜೆಟ್ ಪೂರ್ವದ ಸಂದರ್ಭದಲ್ಲಿ ನಮ್ಮ ಆತ್ಮೀಯ ಶಾಸಕರಾದಂಥ ಗುಳೇದಗುಡ್ಡ ಕ್ಷೇತ್ರದ ಶ್ರೀ ನಂಜಯ್ಯನಮಠ ಅವರು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದಲ್ಲಿ ಮಾತನಾಡುವಂಥ ಸಂದರ್ಭದಲ್ಲಿ - ಉತ್ತರ ಕರ್ನಾಟಕದ ಬಗ್ಗೆ ಈ ಸರ್ಕಾರ ಕಾಳಜಿ ತೋರಿಸಬೇಕು, ಯಾವ ಯಾವ ನಿಟ್ಟಿನಲ್ಲಿ ಆ ಭಾಗದಲ್ಲಿ ಅಭಿವೃದ್ಧಿ ಕುಂಠಿತವಾಗಿದೆಯೋ ಅವೆಲ್ಲವನ್ನೂ ಪೂರೈಕೆ ಮಾಡುವಂಥ ಕೆಲಸ ಮಾಡಬೇಕು' ಎನ್ನುವಂಥ ವಿಚಾರವನ್ನು ಇಟ್ಟಿದ್ದರು. ಅದರ ಹಿನ್ನೆಲೆಯಲ್ಲಿ ಬಜೆಟ್‌ನಲ್ಲಿ ಕೂಡ ಆ ರೀತಿಯ ಪ್ರಸ್ತಾವನೆಯನ್ನು ನಾನು ಓದಿದ್ದೇನೆ. 'ಕರ್ನಾಟಕ ಎಂದರೆ ಬೆಂಗಳೂರು ಅಲ್ಲ, ಕರ್ನಾಟಕ ಬೆಂಗಳೂರಿಗಿಂತ ವಿಶಾಲವಾದದ್ದು, ಬೆಂಗಳೂರು ಜಗತ್ತಿನ ಹತ್ತು ಅಗ್ರಗಣ್ಯ ನಗರಗಳಲ್ಲಿ ಒಂದು ಎಂದು ಗುರುತಿಸಲಾಗುತ್ತಿದೆ. ನಾವು ರಾಜ್ಯದ ಎಲ್ಲಾ ಪ್ರಾಂತ್ಯಗಳನ್ನು ಅಭಿವೃದ್ಧಿಪಡಿಸಬೇಕು, ಅದರಲ್ಲೂ ವಿಶೇಷವಾಗಿ ನಮ್ಮ ಎಲ್ಲಾ ಸಂಪನ್ಮೂಲಗಳನ್ನು ಕಳುಹಿಸಿ ಉತ್ತರ ಕರ್ನಾಟಕವನ್ನು ಸಮಗ್ರವಾಗಿ ಪೋಷಿಸಿ ಅಭಿವೃದ್ಧಿಯ ಮುಖ್ಯ ವಾಹಿನಿಗೆ ತರಬೇಕು ಎನ್ನುವಂಥ' ಭರವಸೆಯನ್ನು ಸರ್ಕಾರ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದಲ್ಲಿ ಏನೇನೂ ಆಗಿಲ್ಲ, ಎನ್ನುವ ಚಿಂತನೆಯನ್ನು ಕೂಡ ಮಾಡಬೇಕು. ಆ ದಿಶೆಯಲ್ಲಿ ಸರ್ಕಾರ ಯಾವ ಯಾವ ಕ್ರಮಗಳನ್ನು ಹಿಂದಿನ ಬಜೆಟ್ ಮಂಡನೆ ನಂತರ ತೆಗೆದುಕೊಂಡಿದೆ ಎನ್ನುವ ಬಗ್ಗೆ ಒಂದೆರಡು ಅಂಕಿಅಂಶಗಳ ಸಹಿತ ಹೇಳಬೇಕಾಗಿದೆ. ಉತ್ತರ ಕರ್ನಾಟಕ ಭೌಗೋಳಿಕ ವಿಸ್ತೀರ್ಣ ತೆಗೆದುಕೊಂಡಾಗ 98,621 ಚದರ ಕಿ.ಮೀ. ಆಗಿದ್ದರೆ ದಕ್ಷಿಣ ಕರ್ನಾಟಕದ ವಿಸ್ತೀರ್ಣ

ಒಟ್ಟು 92,217 ಚದರ ಕಿಲೋಮೀಟರ್ ಆಗಿರುತ್ತದೆ. ಉತ್ತರ ಕರ್ನಾಟಕದಲ್ಲಿ 2511 ಗ್ರಾಮ ಪಂಚಾಯಿತಿಗಳು ಇದ್ದರೆ ವಿಸ್ತೀರ್ಣದಲ್ಲಿ ದಕ್ಷಿಣ ಕರ್ನಾಟಕ ಕಡಿಮೆ ಇದ್ದರೂ ಸಹ ಇಲ್ಲಿ 3181 ಗ್ರಾಮ ಪಂಚಾಯಿತಿಗಳು ಇವೆ. ಅದೇ ರೀತಿ ಉತ್ತರ ಕರ್ನಾಟಕದಲ್ಲಿ 838 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇದ್ದು ಈ ಆಸ್ಪತ್ರೆಗಳಲ್ಲಿ 5939 ಹಾಸಿಗೆಗಳು ಇದ್ದರೆ ದಕ್ಷಿಣ ಕರ್ನಾಟಕದಲ್ಲಿ 14030 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು ಇಲ್ಲಿಯ ಆಸ್ಪತ್ರೆಗಳಲ್ಲಿ 10323 ಹಾಸಿಗೆಗಳ ಸೌಲಭ್ಯವಿದೆ. ಹಾಗೆಯೇ ವಿದ್ಯುತ್ ವಲಯದಲ್ಲಿ ಕೂಡ ನಾವು ಚಿಂತನೆ ಮಾಡಬೇಕಾಗುತ್ತದೆ. ದಕ್ಷಿಣ ಕರ್ನಾಟಕದಲ್ಲಿ 24 ವಿದ್ಯುತ್ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದರೆ ಉತ್ತರ ಕರ್ನಾಟಕದಲ್ಲಿ ಕೇವಲ 17 ಮಾತ್ರ ಮಾಡಲಾಗಿದೆ. ಇವತ್ತಿನ ದಿವಸ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀ ಜೆ.ಹೆಚ್. ಪಟೇಲರನ್ನು ಅಭಿನಂದಿಸಲೇಬೇಕಾಗುತ್ತದೆ. ಅವರನ್ನು ಅಭಿನಂದಿಸದಿದ್ದರೆ ನಾವು ಆತ್ಮವಂಚನೆ ಮಾಡಿಕೊಂಡ ಹಾಗೆ ಆಗುತ್ತದೆ. ಮೊಟ್ಟಮೊದಲ ಬಾರಿಗೆ ಅವರು ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ಜಾರಿಗೆ ತರುವ ಹಿನ್ನೆಲೆಯಲ್ಲಿ ಏಳು ಹೊಸ ಜಿಲ್ಲೆಗಳನ್ನು ಮಾಡಿದರು. ಬಾಗಲಕೋಟೆ ಸೇರಿದಂತೆ ಆ ಏಳು ಹೊಸ ಜಿಲ್ಲೆಗಳು ಕಾರ್ಯೋನ್ಮುಖವಾಗಿವೆ. ಅಲ್ಲಿಯ ಜಿಲ್ಲಾ ಕೇಂದ್ರಗಳಲ್ಲಿ ಎಲ್ಲಾ ಕಛೇರಿಗಳು ಪ್ರಾರಂಭವಾಗಿವೆ. ಇನ್ನೂ ಕೂಡ ಅಲ್ಲಿ ಮೂರ್ನಾಲ್ಕು ಕಡೆ ಜಿಲ್ಲಾ ಕೇಂದ್ರ ಆಗಬೇಕೆನ್ನುವ ಕೂಗು ಕೂಡ ಕೇಳಿಬರುತ್ತಿದೆ. ಬೆಳಗಾಂ, ಗುಲ್ಬರ್ಗಾ ದೊಡ್ಡ ಜಿಲ್ಲೆಯಾಗಿದೆ. ಅದರಂತೆ ಬಾಗಲಕೋಟೆ ಜಿಲ್ಲೆ ದೊಡ್ಡದಾಗಿದ್ದು ಇಲ್ಲಿ ಇನ್ನೂ ಎರಡು ತಾಲ್ಲೂಕು ಆಗಬೇಕೆಂದು ಗುಳೇದಗುಡ್ಡದಲ್ಲಿ ಆಮರಣ ಉಪವಾಸ ಮಾಡುವಂಥ ಒಂದು ಕಾರ್ಯಕ್ರಮ ಕೂಡ ಆಗಿತ್ತು. ಇದನ್ನು ಶ್ರೀ ನಂಜಯ್ಯನಮಠ್ ಅವರು ಪ್ರಸ್ತಾಪ ಮಾಡಲಿಲ್ಲ. ಈ ರೀತಿಯ ವ್ಯವಸ್ಥೆಯನ್ನು ಸರ್ಕಾರ ದಿಟ್ಟತನದಿಂದ ಮಾಡಬೇಕು. ಈ ದಿಶೆಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ವಿನಂತಿ ಮಾಡುತ್ತಾ, ಮುಳುಗಡೆ ಪ್ರದೇಶದಲ್ಲಿ ಸರ್ಕಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಬಹುದೆನ್ನುವ ವಿಚಾರವನ್ನು ನಾನು ಮನಸ್ಸಿನಲ್ಲಿಟ್ಟುಕೊಂಡಿದ್ದೆ. ಆ ಬಗ್ಗೆ ಬಜೆಟ್‌ನಲ್ಲಿ ಕೂಡ ಪ್ರಸ್ತಾವನೆ ಆಗಬಹುದೆಂದಿದ್ದೆ. ನಾನು ಸನ್ಮಾನ್ಯ ಭಾರಿ ನೀರಾವರಿ ಸಚಿವರನ್ನು ಅಭಿನಂದಿಸಲೇಬೇಕು. ಕಳೆದ ಸಾರಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ ಮುಳುಗಡೆ ಪುನರ್‌ವಸತಿ ಕೇಂದ್ರಗಳಿಗೆ ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ಆದರೆ ಇನ್ನೂ ಕೆಲವೊಂದು ಮೂಲಭೂತವಾದ ಸೌಲಭ್ಯಗಳ ಕೊರತೆ ಪುನರ್‌ವಸತಿ ಕೇಂದ್ರಗಳಲ್ಲಿ ಕಾಣುತ್ತಿದೆ. ಆರೋಗ್ಯ ಕೇಂದ್ರಗಳನ್ನು ಮಾಡಿಸುವ ದಿಕ್ಕಿನಲ್ಲಿ ಮಾನ್ಯ ಆರೋಗ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಸಹಕಾರ ತೆಗೆದುಕೊಂಡು ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತಾ, ಪ್ರಾದೇಶಿಕ ಅಸಮತೋಲನವನ್ನು ತೊಡೆದುಹಾಕುವ ದಿಕ್ಕಿನಲ್ಲಿ ಸರ್ಕಾರ ಅನೇಕ ಘೋಷಣೆಗಳನ್ನು ಕೇವಲ ಪುಸ್ತಕಗಳಲ್ಲಿ ಮಾತ್ರ ಮಾಡುತ್ತಿದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಆಗಬೇಕೆನ್ನುವ ಹೋರಾಟ ಇತ್ತು. ವಕೀಲರು ಸಾರ್ವಜನಿಕರು ಆಮರಣ ಉಪವಾಸ ಕೈಗೊಂಡು ಅವರೆಲ್ಲರನ್ನು ಆಸ್ಪತ್ರೆಗೆ ಸೇರಿಸುವಂಥ ಒಂದು ದುಸ್ಥಿತಿ ಅಲ್ಲಿ ಒದಗಿಬಂದಿತ್ತು. ಆದರೆ ಅಲ್ಲಿ ಪ್ರಾಮಾಣಿಕವಾದಂಥ ದಿಟ್ಟತನದ ತೀರ್ಮಾನವನ್ನು ಕೈಗೊಳ್ಳಲಿಕ್ಕೆ ಸರ್ಕಾರದಿಂದ ಆಗಲಿಲ್ಲ. ಏನಾದರೂ ಮಾಡಬೇಕು. ಏನು ಮಾಡಬೇಕೆಂಬುದು ಗೊತ್ತಿಲ್ಲ ಈಗ ತಮಿಳುನಾಡಿನಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಹೈಕೋರ್ಟ್ ಪೀಠಗಳನ್ನು ಎರಡೆರಡು ಕಡೆ ಮಾಡಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅವರ ಭಾಗದಲ್ಲಿ ದೊಡ್ಡ ವಕೀಲರು, ಏನಾದರೂ ಮಾಡ್ರೀ ಎಂದು ಹೇಳಿದರೆ

ಹೇಗೆ? ವಕೀಲರು ಕಾನೂನು ಕಾಯಿದೆ ಇದೆ ಅದರ ಪ್ರಕಾರ ಹೇಳಬೇಕು. ಕಾನೂನು ಕಾಯಿದೆ ಪ್ರಕಾರ ಪ್ರಥಮ ಸಲ ಸ್ಪಷ್ಟವಾದಂಥ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ ಅಷ್ಟೇ ಅಲ್ಲ ಮಾನ್ಯ ಪ್ರಧಾನ ಮಂತ್ರಿಗಳ ಮಟ್ಟಕ್ಕೆ ಹೋಗಿದ್ದೇವೆ. ಅದನ್ನು ಯಾರು ಮಾಡಬೇಕು ಎನ್ನುವುದು ತಮಗೆ ಗೊತ್ತಿದೆ. ತಾವೂ ಕೂಡ ಸ್ವಲ್ಪ ಗೊತ್ತಿರುವಂಥ ಜನ. ಆದ್ದರಿಂದ ಏನೂ ಮಾಡಲಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಪಿ.ಹೆಚ್. ಪೂಜಾರ್ : ಹಾಗೆಯೇ ಕೇಂದ್ರ ಸರ್ಕಾರ ಕೊಡಮಾಡಿದಂಥ ನೈರುತ್ಯ ರೈಲ್ವೆ ವಲಯವನ್ನು ಕೂಡ ಹುಬ್ಬಳ್ಳಿಗೆ ಸ್ಥಳಾಂತರ ಆಗುವಂಥ ಹಿನ್ನೆಲೆಯಲ್ಲಿ ದಕ್ಷಿಣ ಭಾಗದ ಪಟ್ಟಭದ್ರ ಹಿತಾಸಕ್ತಿಗಳು ಇವತ್ತಿನ ವರೆಗೆ ತೊಂದರೆ ಮಾಡುತ್ತಾ ಬಂದಿವೆ. ಆಡಳಿತ ವ್ಯವಸ್ಥೆಯಲ್ಲಿ ಆ ಭಾಗಕ್ಕೆ ಯಾವ ರೀತಿಯ ತೊಂದರೆ ಕೊಡುತ್ತಿದ್ದಾರೆ ಎನ್ನುವುದನ್ನು ನಾನು ಹೇಳಬೇಕಾಗಿದೆ. ಪೌರಾಡಳಿತ ಮತ್ತು ನಗರಾಭಿವೃದ್ಧಿ ಇಲಾಖೆಯ ಸ್ಥಳೀಯ ಸಂಸ್ಥೆಗಳ ದುಸ್ಥಿತಿಯನ್ನು ಹೇಳಲಿಕ್ಕಾಗದು. ಎಸ್ಟಾಬ್ಲಿಶ್‌ಮೆಂಟ್ ಸೆಕ್ಷನ್‌ನ್ನು ಕಡಿಮೆ ಮಾಡಬೇಕು, ನಿಜ. ಈ ದಿಶೆಯಲ್ಲಿ ದಿಟ್ಟವಾದ ಹೆಜ್ಜೆ ಎಂದು ಹೇಳಬಹುದು. ಇದರಲ್ಲಿ ನಮ್ಮ ಭಿನ್ನಾಭಿಪ್ರಾಯವಿಲ್ಲ. ಆದರೆ ಒಂದು ವಿಚಾರದಲ್ಲಿ ಪಕ್ಷಾತೀತವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಾವೆಲ್ಲರೂ ಎಷ್ಟೇ ತೊಂದರೆಗಳು ಇದ್ದಾಗ್ಯೂ ಕೂಡ ಈ ಒಂದು ಸುಸ್ಥಿತಿಯಲ್ಲಿ ನಮ್ಮ ಮೂಲಭೂತ ಸವಲತ್ತುಗಳನ್ನು ಪಡೆಯುವುದರಲ್ಲಾಗಲಿ, ನಿತ್ಯ ಸೌಕರ್ಯಗಳನ್ನು ಉಪಯೋಗಿಸಿಕೊಳ್ಳುವಂತಾಗಲು ನಮ್ಮನಾಲ್ಕನೆ ಮತ್ತು ಐದನೆ ದರ್ಜೆಯ ನೌಕರ ಬಂಧುಗಳ ಪೌರಕಾರ್ಮಿಕರ ಸಹಾಯವನ್ನು ನಾವು ಮರೆಯಲಿಕ್ಕಾಗದು.

10.10 ಎ.ಎಂ.

ನಾನು ಈಗ ಬಾಗಲಕೋಟೆಯ ವಿಚಾರವಾಗಿ ಹೇಳುವುದಾದರೆ, 20 ವರ್ಷಗಳ ಹಿಂದೆ ಈ ಪಟ್ಟಣದ ಜನಸಂಖ್ಯೆ ಸುಮಾರು 40 ಸಾವಿರ ಇದ್ದು ಪೌರ ಕಾರ್ಮಿಕರ ಸಂಖ್ಯೆ ಸುಮಾರು 200 ಜನರು ಇದ್ದರು, ಇವತ್ತು ಈ ಪಟ್ಟಣದ ಜನಸಂಖ್ಯೆ ಒಂದು ಲಕ್ಷ ದಾಟ್ಟಿದ್ದು 20 ಸಾವಿರ ಕಟ್ಟಡಗಳು ಇದ್ದರೂ ಪೌರ ಕಾರ್ಮಿಕರು ಮಾತ್ರ ಕೇವಲ 57 ಜನ ಇದ್ದಾರೆ. ಹೀಗಿರುವಾಗ ಅಭಿವೃದ್ಧಿ ಹೊಂದುತ್ತಾ ಹೋದ ಹಾಗೆ ಅಲ್ಲಿ ಇವರನ್ನು ನೇಮಕಾತಿ ಮಾಡಿಕೊಳ್ಳುವುದು ಬೇಡವೆ? ನಾಲ್ಕನೇ ಮತ್ತು ಐದನೇ ಚಾರ್ಜ್ ನೌಕರರು, ನಮ್ಮ ಪರವಾಗಿ ಕೆಲಸ ಮಾಡುವಂಥವರು ಏನು ಇದ್ದಾರೆ ಇವರನ್ನು ನಾವು ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸುವುದು ಬೇಡವೆ? ಈ ಬಜೆಟ್‌ನಲ್ಲಿ ಅದರ ಬಗ್ಗೆ ಯಾವುದೇ ಪ್ರಸ್ತಾವನೆ ಇಲ್ಲ. ಇನ್ನು ಶಿಕ್ಷಣದ ಬಗ್ಗೆ ಹೇಳುವುದಾದರೆ, ಇವತ್ತಿನವರವಿಗೂ ನಮ್ಮಲ್ಲಿರುವ ಶಾಲೆಗಳಿಗೆ ಕಾಂಪೌಂಡ್‌ಗಳಿಲ್ಲವಾದ್ದರಿಂದ ಶಾಲೆಯ ಆವರಣದಲ್ಲಿ ದನಗಳು, ಕುರಿಗಳು, ಬಂದು ನಿಂತು, ದನದ ಕೊಟ್ಟಿಗೆಯಾಗಿರುವ ದುಸ್ಥಿತಿಯನ್ನು ನಾವಿಂದು ಕಾಣುತ್ತಿದ್ದೇವೆ. ಕಾಂಪೌಂಡ್ ಹಾಕುವ ಕೆಲಸ ಮೈಸೂರು ಭಾಗದಲ್ಲಿ ಆಗಿದೆ ಎಂದು ನೀವೇನು ಹೇಳುತ್ತೀರಿ ಆ ರೀತಿಯಲ್ಲಿ ಯಾವುದಾದರೂ ಸಂಸ್ಥೆಯ ಜೊತೆಗೆ ಒಪ್ಪಂದ ಮಾಡಿಕೊಂಡು ಈ ಕೆಲಸವನ್ನು ನಮ್ಮ ಭಾಗದಲ್ಲಿ ಮಾಡಿಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ಇದಕ್ಕಾಗಿ ಹೆಚ್ಚಿನ ಹಣವನ್ನು ಶಿಕ್ಷಣ ಇಲಾಖೆಗೆ ಕೊಡಬೇಕು. ನೇಕಾರರ ವಿಷಯವಾಗಿ ಹೇಳುವುದಾದರೆ, ನಮ್ಮ ಭಾಗದಲ್ಲಿ ರೈತರ ನಂತರದ ಸ್ಥಾನ ಈ ನೇಕಾರಂದು

ಆಗಿದೆ. ಇವರ ಸಮಸ್ಯೆಗಳು ಉಳಿದಿರುವುದರಿಂದ ಅವರಿಗಾಗಿ ಸರ್ಕಾರ ಶಾಶ್ವತವಾದ ಪರಿಹಾರವನ್ನು ಒದಗಿಸುವಂತೆ ಮಾಡಬೇಕು, ಕೈಮಗ್ಗದ ನೇಕಾರರನ್ನು ಹೆಚ್ಚಿಸುವ ಹಲವಾರು ಯೋಜನೆಗಳು ಕಾರ್ಯಗತವಾಗದೆ ಉಳಿದಿವೆ. ಇವುಗಳನ್ನು ಜಾರಿಗೊಳಿಸುವುದಲ್ಲದೆ, ಇಡೀ ರಾಜ್ಯದಲ್ಲಿ ಇವರಿಂದ ತ್ರಿಫ್ಟ್‌ಫಂಡ್‌ನ್ನು ಸರ್ಕಾರ ಜಮಾ ಮಾಡಿಕೊಂಡು ಅದಕ್ಕೆ ಒಂದು ಭಾಗ ತೊಡಗಿಸಿ ವಿಮಾ ಯೋಜನೆಗೆ ಸೇರಿಸಿ ಮೂರು ಪಟ್ಟು ಕೊಡುವಂಥಾದ್ದು ಆಗಬೇಕಾಗಿದೆ, ಇದು 15 ವರ್ಷಗಳಿಂದ ಇವರಿಂದ ತೆಗೆದುಕೊಂಡ ಹಣ ಹಾಗೆಯೇ ಇದೆ, ಇದಕ್ಕೆ ಸರ್ಕಾರ ತನ್ನ ಪಾಲಿನ ಹಣ ಕೂಡಲೇ ಸೇರಿಸಬೇಕೆಂದು ಮಾನ್ಯ ಜವಳಿ ಸಚಿವರಲ್ಲಿ ವಿನಂತಿಸುತ್ತೇನೆ. ಹಾಗೆಯೇ ಗುಂಪು ವಿಮಾ ಯೋಜನೆಯನ್ನೂ ಜಾರಿಗೆ ತರಬೇಕಾಗಿದೆ. ನೇಕಾರರಿಗೆ ಶೆಡ್ಡುಗಳನ್ನು ಒದಗಿಸುವ ಕಾರ್ಯದ ಜೊತೆಗೆ ಇವರಿಗೆ ಮನೆಗಳನ್ನು ಒದಗಿಸುವುದರ ಬಗ್ಗೆ ಜವಳಿ ಇಲಾಖೆಯಿಂದ ಮಾಡಬೇಕೆಂದು ವಿನಂತಿಸುತ್ತೇನೆ. ಒಂದು ಹಂತದಲ್ಲಿ ನಮ್ಮ ಭಾಗದಲ್ಲಿ ಸುಮಾರು 37 ಸಾವಿರ ನೇಕಾರರ ಕುಟುಂಬಗಳು ಇದ್ದು ಇವತ್ತು 10 ಸಾವಿರ ಕೂಡ ಉಳಿದಿಲ್ಲ ಹೀಗಾಗಿ ಉಳಿದಿರುವ 10 ಸಾವಿರ ನೇಕಾರರಿಗೆ ನಿರಂತರವಾಗಿ ಕೆಲಸ ದೊರೆಯುವ ಹಾಗೆ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳಬೇಕು. ನೇಕಾರರ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, "ಹೊಗೆಗು ಎನ್ನಲಾರದೆ ಹೊರಗೆ ಹಾಕಿದಂತೆ" ಆಗಿದೆ. ಇಂಥ ದುಸ್ಥಿತಿಯನ್ನು ಸರ್ಕಾರ ಗಮನಿಸಿ ಇವರಿಗಾಗಿ ವಿಸ್ತೃತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಹಾಗೂ ಇವರ ಅಭಿವೃದ್ಧಿ ಸಲುವಾಗಿ ಈ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಮೀಸಲಿಡಬೇಕೆನ್ನುವ ಒತ್ತಾಯ ಮಾಡುತ್ತೇನೆ. ನಾನು ಮುಳುಗಡೆ ಪ್ರದೇಶದಿಂದ ಬಂದಂಥವನು, ಹೀಗಾಗಿ ಈ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲಿಚ್ಚಿಸುತ್ತೇನೆ, ಸರ್ಕಾರ ಈ ಭಾಗದಲ್ಲಿ ಕೆ.ಜೆ.ಬಿ.ಎನ್. ಇರಬಹುದು, ಕೆ.ಹೆಚ್.ಡಿ.ಸಿ. ಇರಬಹುದು, ಇವುಗಳನ್ನು ಸ್ಥಳಾಂತರಗೊಳಿಸುವ ಬಗ್ಗೆ ಯಾವುದೇ ಕಾರ್ಯವನ್ನು ಮಾಡಿಲ್ಲ. ಈ ಭಾಗದ ಜನರು, ಮುಳುಗಡೆ ಪ್ರದೇಶದ ಮೂರು ಜನರನ್ನು ಮಂತ್ರಿಗಳನ್ನಾಗಿ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವುದರಿಂದ ನಮ್ಮ ಜಿಲ್ಲೆಯ ಬಗ್ಗೆ ಬಹಳ ಕರುಣೆ ತೋರಿದ್ದಾರೆಂದುಕೊಂಡಿದ್ದರು. ಮುಳುಗಡೆ ಪ್ರದೇಶದಿಂದಾಗಿ ಉಂಟಾಗಿರುವ ಬೃಹತ್ ನಿರುದ್ಯೋಗಿ ಸಮಸ್ಯೆಯನ್ನು ನಿವಾರಿಸಲು ಅವರ ಮೂಲಕ ಒಂದೆರಡು ಬೃಹತ್ ಉದ್ಯಮಗಳು ನಮ್ಮ ಭಾಗದಲ್ಲಿ ಈ ವರ್ಷವಾದರೂ ತಲೆ ಎತ್ತಬಹುದೆಂದು ತಿಳಿದಿದ್ದ ನಮ್ಮ ಭಾಗದ ಜನರಿಗೆ ಮತ್ತೊಮ್ಮೆ ನಿರಾಶೆಯಾಗಿದೆ. ಇಲ್ಲಿಯವರೆವಿಗೂ ಬಂದಂಥ ಸರ್ಕಾರಗಳು ಈ ಭಾಗಕ್ಕೆ ಏನೂ ಮಾಡಲಿಲ್ಲ. ಮುಳಗಡೆಯಾದ ಪ್ರದೇಶದ ಜನರಿಗೆ ಸ್ವಲ್ಪ ಪರಿಹಾರ ಧನ ನೀಡುವುದನ್ನು ಬಿಟ್ಟರೆ ಬೇರೆ ಏನೂ ಮಾಡಿಲ್ಲ. ನೀವು ತ್ಯಾಗ ಜೀವಿಗಳು, ಮತ್ತೊಬ್ಬರಿಗಾಗಿ ನಿಮ್ಮದೆಲ್ಲವನ್ನು ನೀವು ಕಳೆದುಕೊಂಡವರು, ನೀವು ಆದರ್ಶಪ್ರಾಯರು, ನಿಮ್ಮ ತ್ಯಾಗ ಸ್ವಾತಂತ್ರ್ಯ ಯೋಧರ ತ್ಯಾಗಕ್ಕೆ ಸಮಾನ, ಹಿಗೇಂದು ನಮ್ಮ ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯರೊಬ್ಬರು ಹೇಳುವುದನ್ನು ಬಿಟ್ಟರೆ ಬೇರೆ ಏನೂ ಮಾಡಿಲ್ಲ. ನಿಮ್ಮ ತ್ಯಾಗಕ್ಕೆ ನಾವು ಗೌರವ ಕೊಡುತ್ತೇವೆ, ನಿಮ್ಮ ಜೀವನವನ್ನು ನಾವು ಉತ್ತಮವಾಗಿ ಮಾಡುತ್ತೇವೆ, ಹೀಗೆಂದು ಅಲ್ಲಿಗೆ ಬಂದಂಥ ಎಲ್ಲಾ ಸಚಿವರು ಇದೇ ಮಾತುಗಳನ್ನು ಹೇಳುತ್ತಿದ್ದಾರೆ. ನಿವೇಶನ ರಹಿತರಿಗೆ ಪರಿಹಾರವೊಂದನ್ನು ಬಿಟ್ಟರೆ ಆರ್ಥಿಕ ಅಭಿವೃದ್ಧಿಗಾಗಿ ಇವರೇನೂ ಕಾರ್ಯಕ್ರಮವನ್ನು ಅಲ್ಲಿ ತಂದಿಲ್ಲ. ನೀವು ಯಾವ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದ್ದೀರಿ? ಎಷ್ಟು ಕುಟುಂಬಗಳು ಫಲಾನುಭವಿಗಳಾಗಿದ್ದಾರೆ

ಎಂಬಂಥ ಪ್ರಶ್ನೆಯನ್ನು ಅವರಿಗಾಗಿ ಕೇಳಬಯಸುತ್ತೇನೆ. ಸ್ವಾಮಿ, ಇದುವರೆವಿಗೂ ನೀವು ಒಂದೇ ಒಂದು ಚುಟುಂಬವನ್ನು ಸ್ವಾವಲಂಭಿಯನ್ನಾಗಿ ಮಾಡಿಲ್ಲ. ಕಳೆದ ಒಂದು ವರ್ಷದ ಯಾವುದೇ ಒಂದು ಬೃಹತ್ ಉದ್ದಿಮೆಯನ್ನು ಸ್ಥಾಪಿಸಿ ನಿರುದ್ಯೋಗದ ಸಮಸ್ಯೆಯನ್ನು ಕೊನೆಗಾಣಿಸಲು ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ತಾವು ದಯಮಾಡಿ ಎದೆ ತಟ್ಟಿಕೊಂಡು ಈ ವಿಷಯಕ್ಕೆ ಉತ್ತರ ಹೇಳಬೇಕಾಗುತ್ತದೆ. ಕಳೆದ ಒಂದು ವರ್ಷದಲ್ಲಿ ಯಾವುದೇ ರೀತಿಯ ಮೂಲಭೂತ ಸೌಲಭ್ಯವನ್ನು ಹೆಚ್ಚಿಸಲು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ದೊರಕದೆ ಕಂಗಾಲಾದ ಪರಿಸ್ಥಿತಿಯಲ್ಲಿ, ರಾಜ್ಯದಲ್ಲಿ ಬಡತನ ಕಡಿಮೆಯಾಗಿದೆ ಎನ್ನುವ ಆರ್ಥಿಕ ಸಮೀಕ್ಷೆಯನ್ನು ತಾವು ಮುಂದಿಟ್ಟಿದ್ದೀರಿ ಇದು ಯಾವ ನ್ಯಾಯ? ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ತೊರತು ಪಡಿಸಿದಂತೆ ಉಳಿದ ಕಡೆಗಳಲ್ಲಿ ಉದ್ಯೋಗ ಅವಕಾಶಗಳು ಕಡಿಮೆಯಾಗಿಲ್ಲವೇ? ಸರ್ಕಾರದ ಯೋಜನೇತರ ವೆಚ್ಚವನ್ನು ಕಡಿಮೆಗೊಳಿಸಲು ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಅಬಕಾರಿ ಹಾಗೂ ವಾಣಿಜ್ಯ ತೆರಿಗೆಯಲ್ಲಿ ಸೋರುತ್ತಿರುವ ತೆರಿಗೆ ಬಾಬ್ತು ಹಾಗೂ ಸಂಗ್ರಹ ತಡೆಯಲು ಯಾವುದೇ ಸಂಕಲ್ಪ ತಮ್ಮ ಬಜೆಟ್‌ನಲ್ಲಿ ಆಗಲಿಲ್ಲ. ರಾಜ್ಯದಲ್ಲಿ ಸಾಕಷ್ಟು ಸಂಕಷ್ಟದಲ್ಲಿರುವ ರೈತರಿಗೆ ನೆರವಾಗುವಂಥ ಯಾವುದೇ ಪೂರಕ ಪ್ರಯತ್ನ ಈ ಬಜೆಟ್‌ನಲ್ಲಿ ತಾವು ಮಾಡಲಿಲ್ಲ. ಯುವಕರಿಗಾಗಿ ಉದ್ಯೋಗ ಕಲ್ಪಿಸುವ ಯಾವುದೇ ಯೋಜನೆಯನ್ನು ನೀವು ಹಾಕಲಿಲ್ಲ, ಇದರ ಜೊತೆಗೆ ಶಾಸಕ ನಿಧಿಯ ವಿಚಾರವಾಗಿ ಹೇಳುವುದಾದರೆ, ಇಲ್ಲಿಯವರೆಗೆ ನಮ್ಮ ಮತ ಕ್ಷೇತ್ರದ ಜನ ನಮ್ಮನ್ನು ಮಲತಾಯಿ ಧೋರಣೆಯಿಂದ ಕಾಣುತ್ತಿದ್ದರು, ಸನ್ಮಾನ್ಯ ಪ್ರಾಜಪೇಯಿಯವರು ಸಂಸದರಿಗೆ ಸುಮಾರು ಎರಡು ಕೋಟಿ ರೂಪಾಯಿಗಳನ್ನು ನೀಡಿದಂಥ ಸಂದರ್ಭದಲ್ಲಿ ಅವರ ಬೆನ್ನು ಹಿಂದೆಯೇ ನಮ್ಮ ಜನ ಅಡ್ಡಾಡುತ್ತಿದ್ದರು. ನಮ್ಮನ್ನು ಯಾರೂ ಕರೆಯುತ್ತಿರಲಿಲ್ಲ.

ಅಧ್ಯಕ್ಷರು : ಮಾನ್ಯ ಸಂಗಣ್ಣನವರೇ, ತಾವು ಚರ್ಚೆಯನ್ನು ಪ್ರಾರಂಭಿಸಿ, ಮಾನ್ಯ ಪೂಜಾರ್‌ರವರೇ ಕ್ಷಮಿಸಬೇಕು. ತಾವು ಈಗಾಗಲೇ 16 ನಿಮಿಷಗಳಿಗಿಂತಲೂ ಹೆಚ್ಚು ಮಾತನಾಡಿರುವುದರಿಂದ ತಾವು ನಿಲ್ಲಿಸಿ, ಮಾನ್ಯ ಸಂಗಣ್ಣನವರು ತಾವು ಪ್ರಾರಂಭಿಸಿ.

(ಗೊಂದಲ)

ಅಧ್ಯಕ್ಷರು : ನಿನ್ನೆ 10 ನಿಮಿಷವೆಂದು ತೀರ್ಮಾನವಾಗಿ ಇವತ್ತು 16 ನಿಮಿಷ ಮಾತನಾಡಿದರೆ ಹೇಗೆ?

ಶ್ರೀ ಪಿ. ಹೆಚ್. ಪೂಜಾರ್ : ಹೊಸ ಸದಸ್ಯರಿಗೆ ಅವಕಾಶ ಮಾಡಿಕೊಡಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಜಾಸ್ತಿ ಸಮಯ ತೆಗೆದುಕೊಳ್ಳುತ್ತಾರಲ್ಲಾ, ಅವರಿಗೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಾವು ತಪ್ಪು ತಿಳಿದುಕೊಳ್ಳದೇ ಹೋದರೆ ನಾನು ಒಂದು ಮಾತು ಹೇಳಲಿಚ್ಚಿಸುತ್ತೇನೆ. ಅವರು 26 ಕ್ಕೆ ಮಂಡಿಸಿ 30ಕ್ಕೆ ಮುಗಿಸುವುದಾದರೆ ಯಾರೂ ಮಾತನಾಡುವುದೇ ಬೇಡ ದಯಮಾಡಿ ಮುಗಿಸಿಬಿಡಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ನಿನ್ನೆ ಹತ್ತು ನಿಮಿಷವೆಂದು ತೀರ್ಮಾನವಾಗಿ ಇವತ್ತು 15, 16, ನಿಮಿಷ ಮಾತನಾಡಿದರೆ ಹೇಗೆ? ಜಾಸ್ತಿ ಮಾತನಾಡುವ ಸದಸ್ಯರು ಅವರಿಗೆ ಅವಕಾಶ ಮಾಡಿಕೊಡಬಹುದಲ್ಲವೆ? ಜಾಸ್ತಿ ಮಾತನಾಡುವ ಸದಸ್ಯರು ಸ್ವಲ್ಪ ಕಡಿಮೆ ಮಾತನಾಡಿದರೆ ಎಲ್ಲಾ ಸರಿಹೋಗುತ್ತದೆ. ಹತ್ತು ನಿಮಿಷ ಅವಕಾಶ ಕೊಟ್ಟರೆ ಹತ್ತು ನಿಮಿಷ ಮಾತನಾಡಿ ಇನ್ನೂ ಮುಗಿಸಿಲ್ಲವೆಂದರೆ ಏನರ್ಥ? ಮಾನ್ಯ ಸಂಗಣ್ಣನವರೇ, ತಾವು ಪ್ರಾರಂಭಿಸಿ.

(ಗೊಂದಲ)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನಿನ್ನೆ ರಾತ್ರಿ ಮಾನ್ಯ ಸಿಂಧ್ಯಾರವರು, ಸೋಮಶೇಖರ್ ರವರು ಎಸ್.ಎಸ್. ಪಾಟೀಲರು ಎಲ್ಲರೂ ಇದ್ದಾಗ ಅವರೇ ತೀರ್ಮಾನಿಸಿದ್ದಾರೆ.

ಶ್ರೀ ಸಿ. ಭೈರೇಗೌಡ : ನಿಮ್ಮ ಬುದ್ಧಿವಾದ ನಮಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ 10-30 ಗಂಟೆಯೊಳಗೆ ನಾಲ್ಕು ಜನ ಸದಸ್ಯರು ಮಾತನಾಡುತ್ತಾರೆ. ಆದ್ದರಿಂದ ಅವಕಾಶವನ್ನು ಕೊಡಬೇಕೆಂದು ನಿನ್ನೆದಿವಸ ವಿರೋಧಪಕ್ಷದ ನಾಯಕರಾದ ಸನ್ಮಾನ್ಯ ಸಿಂಧ್ಯಾರವರು ಮತ್ತು ಸನ್ಮಾನ್ಯ ಸೋಮಶೇಖರ್‌ರವರು ಕೇಳಿದ್ದಕ್ಕೆ ತಾವು ಒಪ್ಪಿಕೊಂಡಿದ್ದೀರಿ. ಇದಕ್ಕೆ ಅವರೂ ಸಹ ಒಪ್ಪಿಕೊಂಡಿದ್ದು, ಇದರ ಪ್ರಕಾರ ಸದನ ನಡೆಯಬೇಕು. ಆದರೆ ಇವರು ರಾತ್ರಿ ಒಂದು ಮಾತನ್ನು ಹೇಳಿದರು. ಮತ್ತೆ ಈಗ ಬೇರೊಂದು ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು : ಒಬ್ಬೊಬ್ಬರು ಹತ್ತು ನಿಮಿಷದವರೆಗೆ ಮಾತನಾಡುತ್ತಾರೆಂದು ನಿಮ್ಮ ನಾಯಕರುಗಳೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಹತ್ತು ನಿಮಿಷದೊಳಗೆ ನಿಮ್ಮ ಭಾಷಣವನ್ನು ಮುಗಿಸಿ. ಬೇರೆ ಏನೇನು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಎಸ್.ಎಸ್. ಪಾಟೀಲ್ : ಹಾಗಾದರೆ ನಾವ್ಯಾರೂ ಮಾತನಾಡುವುದಿಲ್ಲ.

ಅಧ್ಯಕ್ಷರು : ಇವರ್ಯಾರು ಮಾತನಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಉತ್ತರ ಕೊಡುವುದಕ್ಕೆ ಮುಖ್ಯಮಂತ್ರಿಯವರನ್ನು ಕರೆಯಿರಿ. ನಿಮ್ಮಲ್ಲಿ ಒಬ್ಬೊಬ್ಬರು ಎರಡು - ಮೂರು ಗಂಟೆ ಮಾತನಾಡಿದ್ದಾರೆ. ಮತ್ತೆ ನಿಮಗೆ ಎಷ್ಟು ಸಮಯ ಬೇಕು.

ಶ್ರೀ ಹೆಚ್.ಸಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ನನಗೆ ಕನಿಷ್ಟ ಪಕ್ಷ ಹದಿನೈದು ಸಮಯ ಬೇಕಾಗುತ್ತದೆ. ಇವತ್ತಿನ ದಿವಸ ಎಷ್ಟೋ ಅಂತರ್‌ರಾಷ್ಟ್ರೀಯ ಅಗ್ರಿಮೆಂಟ್‌ಗಳೇ ಹೊರಟು ಹೋಗಿವೆ. ಆದ್ದರಿಂದ ಅಗ್ರಿಮೆಂಟ್ ಪ್ರಕಾರ ಇಷ್ಟೇ ಸಮಯ ಮಾತನಾಡಬೇಕೆಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ನೆನ್ನೆದಿವಸ ಹತ್ತು ನಿಮಿಷ ಸಾಕೆಂದು ಅವರೇ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ಕಡೆ ಈಗಾಗಲೇ ಒಬ್ಬೊಬ್ಬರು ಎರಡೆರಡು ಗಂಟೆಗಳ ಕಾಲ ಮಾತನಾಡಿದ್ದಾರೆ. ಆದ್ದರಿಂದ ದಯವಿಟ್ಟು ಅವರಿಗೆ ಮೊದಲು ಹೇಳಿ.

(ಗೊಂದಲ)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಇವತ್ತು 10.30 ಗಂಟೆಯೊಳಗೆ ಮುಗಿಸುತ್ತೇವೆಂದು ಮಾನ್ಯ ಪಾಟೀಲ್‌ರವರೇ ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ನಾಲ್ಕು ದಿವಸದಲ್ಲಿ ಬಜೆಟ್ ಪಾಸ್ ಮಾಡಿಕೊಂಡಿರತಕ್ಕಂಥದ್ದು ನಾನು ಯಾವ ರಾಜ್ಯದಲ್ಲಿಯೂ ನೋಡಿಲ್ಲ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಆಯವ್ಯಯದ ಮೇಲೆ ಚರ್ಚೆ ಮಾಡುವಾಗ ಒಂದೊಂದು ಪಕ್ಷದವರಿಗೆ ಎಷ್ಟು ಸಮಯದವರೆಗೆ ಮಾತನಾಡಬೇಕೆಂದು ತಾವು ಸಮಯವನ್ನು ನಿಗದಿ ಮಾಡಬೇಕು.

ಅಧ್ಯಕ್ಷರು : ಮಾನ್ಯ ಚೆನ್ನಿಗಪ್ಪನವರೇ, ತಾವು 1 ಗಂಟೆ 10 ನಿಮಿಷ ಮಾತನಾಡಿದ್ದೀರಿ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಮಾನ್ಯ ಕರಡಿ ಸಂಗಣ್ಣನವರೇ ಮಾತನಾಡಿ. ತಾವು ಮಾತನಾಡದಿದ್ದರೆ ಮಾನ್ಯ ಬಸವರಾಜು ಮಾತನಾಡುತ್ತಾರಷ್ಟೆ. ಮೊದಲು ನಾವು ಯಾವ ರೀತಿ ಅಗ್ರಿಮೆಂಟ್ ಮಾಡಿಕೊಂಡಿರುತ್ತೇವೆಯೋ ಅದರ ಪ್ರಕಾರ ತಾವೆಲ್ಲರೂ ನಡೆದುಕೊಳ್ಳಬೇಕು. ಅದನ್ನು ಪಾಲನೆ ಮಾಡದೇ ಇದ್ದರೆ ನಾವು ಒಪ್ಪಿಕೊಳ್ಳುವುದರಲ್ಲಿ ಅರ್ಥ ಏನಿದೆ?

ಶ್ರೀ ಆರ್.ವಿ. ದೇಶಪಾಂಡೆ : ಕೇಂದ್ರ ಸರ್ಕಾರದ ಬಜೆಟ್ ಮೇಲೆ ಯಾವುದೇ ರೀತಿಯ ಚರ್ಚೆ ಇಲ್ಲದೇ ಫೈನಾನ್ಸ್ ಬಿಲ್ ಪಾಸ್ ಆಗಿದೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಇವತ್ತಿನ ದಿವಸ ಅಲ್ಲಿ ಚರ್ಚೆಗೆ ಬನ್ನಿ ಎಂದರೆ ಯಾರು ಸಹ ಬರುವುದಕ್ಕೆ ತಯಾರಿಲ್ಲ. ಎಲ್ಲರೂ ಬಾವಿಯೊಳಗೆ ಕುಳಿತುಕೊಳ್ಳುತ್ತೀರಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ಮಾಡಬೇಕೆಂದು ಇದ್ದೀರಾ?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ತಮಗೆ ಅವಶ್ಯಕತೆ ಇದ್ದರೆ ಬೇಗ ಪಾಸ್ ಮಾಡಿಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಇಲ್ಲದೇ ಇದ್ದರೂ ಸಹ ನಾವು ಪಾಸ್ ಮಾಡಿಕೊಳ್ಳುತ್ತೇವೆ. ಆ ಪ್ರಶ್ನೆ ಈಗ ಬೇಡ. ಆದರೆ, ಅಧ್ಯಕ್ಷರು ತೆಗೆದುಕೊಂಡಿರತಕ್ಕಂಥ ತೀರ್ಮಾನಕ್ಕೆ ಮತ್ತೆ ಪ್ರಶ್ನೆ ಮಾಡಬಾರದು.

ಶ್ರೀ ಡಿ.ವಿ. ಸದಾನಂದಗೌಡ : ನಾವು ಅಧ್ಯಕ್ಷರ ಸ್ಥಾನಕ್ಕೆ ಗೌರವ ಕೊಟ್ಟೇ ಮಾತನಾಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿನ್ನೆ ಸಾಯಂಕಾಲ ನಾಲ್ಕು ಜನ ಮಾತ್ರ ಮಾತನಾಡುತ್ತೇವೆ ಎಂದು ಪಟ್ಟಿ ಕೊಟ್ಟು, ಇವತ್ತು ಬೆಳಿಗ್ಗೆ ಬಂದು ಪ್ರೆಷರ್ ಹಾಕುತ್ತಿದ್ದೀರಿ. ನಮಗೆ ಎಲ್ಲಾ ಗೊತ್ತಿದೆ. ತಾವು ಕುಳಿತುಕೊಳ್ಳಿ. ಪ್ರತಿಯೊಂದು ವಿಷಯದ ಮೇಲೆ ಮೂರು ಮೂರು ಗಂಟೆ ಮಾತನಾಡುತ್ತೀರಿ.

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣನವರೇ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ.

ಶ್ರೀ ಪಿ.ಎಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ತಾವು ತೆಗೆದುಕೊಂಡಿರತಕ್ಕಂಥ ನಿರ್ಣಯಕ್ಕೆ ಮಾನ್ಯ ಸಚಿವರು ವಿಮರ್ಶೆ ಮಾಡುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನೇನೂ ವಿಮರ್ಶೆ ಮಾಡಲಿಲ್ಲ. ವಿಮರ್ಶೆಯನ್ನು ಅವರು ಮಾಡಿದ್ದಾರೆ.

(ಗೊಂದಲ)

ಶ್ರೀ ಪಿ.ಎಚ್. ಪೂಜಾರ್ : ಅಧ್ಯಕ್ಷರ ತೀರ್ಮಾನವನ್ನು ನಾವೇನೂ ಪ್ರಶ್ನೆ ಮಾಡಿಲ್ಲ. ಇವತ್ತು ಎಲ್ಲರೂ ಬಜೆಟ್ ಮೇಲೆ ಮಾತನಾಡಬೇಕಾಗಿರುವುದರಿಂದ ಸ್ವಲ್ಪ ಸಮಯ ಕೊಡಿ ಎಂದು ಕೇಳಿದವಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಮಾತನಾಡಬಾರದೆಂದು ನಾವೇನೂ ರಿಸ್ಟ್ರಿಕ್ಟ್ ಮಾಡಿಲ್ಲ. ಇವತ್ತು ನಾಲ್ಕು ಜನ ಸದಸ್ಯರು ಮಾತನಾಡುತ್ತಾರೆಂದು ನಿನ್ನೆ ಸಾಯಂಕಾಲ ತಾವೇ ಪಟ್ಟಿಯನ್ನು ಕೊಟ್ಟಿದ್ದೀರಿ. ಇವತ್ತು ನ್ಯಾಯವಾಗಿ ಉತ್ತರ ಇತ್ತು. ಆದರೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದ್ದರಿಂದ ತಾವು ಯಾವ ಕಾರಣಕ್ಕೋಸ್ಕರ ಜಗಳ ಮಾಡುತ್ತಿದ್ದೀರಿ. ಮೊದಲು ನಾಲ್ಕು ಜನ ಸದಸ್ಯರು ಮಾತನಾಡಲಿ. ಆಮೇಲೆ ನೋಡೋಣ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಅಧ್ಯಕ್ಷರ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಇದರಲ್ಲಿ ಎರಡು ಮಾತಿಲ್ಲ. ಆದರೆ ಇವರು ಪದೇ ಪದೇ ಏನಾದರೂ ಮಾತನಾಡುವುದು ಮತ್ತು ಪಾರ್ಲಿಮೆಂಟ್ ಬಗ್ಗೆ ಮಾತನಾಡುವುದು ಸರಿಯಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಾಲ್ಕು ದಿವಸದಲ್ಲಿ ಮಂಜೂರು ಮಾಡಿಸಿಕೊಳ್ಳತಕ್ಕಂಥದ್ದು ಇತಿಹಾಸದಲ್ಲಿಯೇ ಇಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆ ಇಲ್ಲದೇ ಬಿಲ್ ಪಾಸ್ ಆಗಿವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, (x)

ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆ ಮಾತನಾಡುವುದನ್ನು ಬರೆದುಕೊಳ್ಳಬೇಡಿ. ತಾವು ಬಯವಿಟ್ಟು ಕುಳಿತುಕೊಳ್ಳಿ. ಈಗ ಕರಡಿ ಸಂಗಣ್ಣನವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿ. ಕರಡಿ ಸಂಗಣ್ಣನವರು ಮಾತನಾಡುವುದನ್ನು ಮಾತ್ರ ತೆಗೆದುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ತಹಲ್ಕಾ ಡಾಟ್‌ಕಾಂ ಪ್ರಕರಣ ನಮ್ಮಲ್ಲೇನೂ ಆಗಿಲ್ಲ.

(ಗೊಂದಲ)

ಶ್ರೀ ಡಿ.ಎ. ಸಚಾನಂದಗೌಡ : ಪಾರ್ಲಿಮೆಂಟ್‌ನಲ್ಲಿ ಚರ್ಚೆಗೆ ಕರೆದಾಗ ಏಕೆ ಹೋಗಲಿಲ್ಲ? ಪಾರ್ಲಿಮೆಂಟ್‌ನಲ್ಲಿ ಚರ್ಚೆಗೆ ಭಾಗವಹಿಸುವುದಕ್ಕೆ ನಿಮ್ಮ ಎಂ.ಪಿ.ಗಳಿಗೆ (x)

(ಗೊಂದಲ)

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣನವರೇ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ.

+ ಶ್ರೀ ಕರಡಿ ಸಂಗಣ್ಣ (ಕೊಪ್ಪಳ) : ಸನ್ಮಾನ್ಯ ಅಧ್ಯಕ್ಷರೆ, 2001-2002ನೇ ಇಸವಿಯ ಆಯವ್ಯಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಪ್ರಪ್ರಥಮವಾಗಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ. "ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು" ಕನ್ನಡದ ಹೆಮ್ಮೆಯ ಕವಿ ಕುವೆಂಪುರವರ ಸ್ವಾಗತಾರ್ಹವಾದ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಯವರು 2000-2001ನೇ ಇಸವಿಯ ಬಜೆಟ್‌ನಲ್ಲಿ ಉಲ್ಲೇಖ ಮಾಡಿದ್ದಾರೆ. ನಮ್ಮ ಕವಿ ಕಂಡಿರತಕ್ಕಂಥ ಕನಸು ನನಸಾಗುತ್ತದೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಇವತ್ತಿನ ಬಜೆಟ್‌ನ್ನು ನೋಡಿದಾಗ ಕಂಡು ಬರುವುದೇನೆಂದರೆ, ಇಡೀ ರಾಜ್ಯ ಕಗ್ಗತ್ತಲಿನಲ್ಲಿ ತುಂಬಿದೆ. ಹಿಂದಿನ ಸರ್ಕಾರ ಸುಮಾರು 68 ಲಕ್ಷ ಕಾರ್ಡುಗಳನ್ನು ಕಡುಬಡವರಿಗೆ ಕೊಟ್ಟಿದ್ದರು. ಆದರೆ, ಈ ಸರ್ಕಾರ ಕಡಿಮೆ ಮಾಡಿ ಸುಮಾರು 22 ರಿಂದ 25 ಲಕ್ಷ ಜನರಿಗೆ ಕೊಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಹಾಗೆಯೇ ಇವತ್ತಿನದಿವಸ ರೈತ ಬೆಳೆದಿರತಕ್ಕಂಥ ಬೆಳೆಯ ಬೆಲೆ ಕುಸಿದಿದೆ. ಇವೆಲ್ಲವನ್ನೂ ನೋಡಿದಾಗ "ಸರ್ವರಿಗೆ ಸಮಪಾಲು, ಸಮಬಾಳು" ಎನ್ನತಕ್ಕಂಥವರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತಿನ ಬಜೆಟ್‌ನಲ್ಲಿ ವಿದ್ಯುಚ್ಛಕ್ತಿಗೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. 210 ಮೆ.ವ್ಯಾ. ಸಾಮರ್ಥ್ಯದ ರಾಯಚೂರು ಥರ್ಮಲ್ 7ನೇ ಘಟಕವನ್ನು 2003ನೇ ಇಸವಿಗೆ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಹಾಗೆಯೇ, ಆಲಮಟ್ಟಿ 290 ಮೆ.ವ್ಯಾ. ಜಲವಿದ್ಯುತ್ ಯೋಜನೆಯನ್ನು 2004ನೇ ಇಸವಿಯಲ್ಲಿ ಮತ್ತು ಗೇರು ಸೊಪ್ಪೆ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಇದನ್ನು ನಾವು ಸ್ವಾಗತ ಮಾಡಬೇಕಾಗಿದೆ. ಆದರೆ ಮೇ ಒಂದನೇ ತಾರೀಖಿನಿಂದ ರೈತರ ಪಂಪ್‌ಸೆಟ್‌ಗಳಿಗೆ

+ ಈ ಪದಗಳನ್ನು ಅಧ್ಯಕ್ಷರ ಅನುಮತಿಯ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ರಾತ್ರಿ 10-00 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರಿಗೆ ವಿದ್ಯುತ್ ಒದಗಿಸುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಣೆ ಮಾಡಿದ್ದಾರೆ. ನೆನ್ನೆದಿವಸ ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ಕೊಪ್ಪಳದಲ್ಲಿ ವಿದ್ಯುತ್ ಕ್ಷಾಮ ಎಂದು ಅರ್ಧ ಪುಟಗಳಷ್ಟು ಬರೆದಿದ್ದಾರೆ. ಈಗಾಗಲೇ ರಾಯಚೂರಿನ 5ನೇ ಘಟಕ ಕೆಟ್ಟಿದ್ದರೂ ಸಹ ಮೇ ಒಂದನೇ ತಾರೀಖಿನಿಂದ ರೈತರಿಗೆ ವಿದ್ಯುತ್ ಕೊಡುತ್ತೇವೆಂದು ತಾವು ಹೇಳಿರತಕ್ಕಂಥದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಈಗ ಇರತಕ್ಕಂಥ ರೈತನ ಬೆಳೆಗೆ ನೀರು ಇಲ್ಲದೇ ಹಾಳಾಗುತ್ತಿದೆ. ಆದ್ದರಿಂದ, ಈ ಫಸಲುಗಳು ಉಳಿಯುವುದಕ್ಕೋಸ್ಕರ ಇವತ್ತಿನಿಂದಲೇ ವಿದ್ಯುತ್ ಕೊಡುತ್ತೇವೆಂದು ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ರೈತ ಬೆಳೆದಿರತಕ್ಕಂಥ ಫಸಲು ಉಳಿಯುತ್ತದೆ ಮತ್ತು ರೈತನ ನೆರವಿಗೆ ಬಂದಂಥಾಗುತ್ತದೆ. ಆದರೆ ತಾವು ಎರಡು ತಿಂಗಳ ನಂತರ ವಿದ್ಯುತ್ ಕೊಟ್ಟರೆ, ರೈತ ಹೂಡಿರತಕ್ಕಂಥ ಬಂಡವಾಳದ ನಷ್ಟವನ್ನು ತುಂಬಿಕೊಡುವವರು ಯಾರು? ವಿರೋಧಪಕ್ಷದ ನಾಯಕರು ಮತ್ತು ಆಡಳಿತ ಪಕ್ಷದ ಸದಸ್ಯರುಗಳು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ರೈತನ ನೆರವಿಗೆ ಹೋಗಬೇಕು ಎನ್ನತಕ್ಕಂಥದ್ದು ಎಲ್ಲರ ಮನಸ್ಸಿನ ಭಾವನೆಯಾಗಿತ್ತು. ಹಾಗೆಯೇ ಸನ್ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ರೈತರ ಮೇಲೆ ಆಶಾಭಾವನೆಯನ್ನು ಇಟ್ಟುಕೊಂಡು ರೈತನಿಗೆ ಒಳ್ಳೆಯದು ಮಾಡಬೇಕೆಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 35 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಗೆಯೇ ರೈತರು ಸಹಕಾರ ಸಂಘಗಳಿಂದ ಸಾಲ ಪಡೆದುಕೊಂಡಿದ್ದು, ಇವತ್ತಿನದಿವಸ ರೈತ ಬೆಳೆದಿರತಕ್ಕಂಥ ಬೆಳೆಗೆ ಒಳ್ಳೆಯ ಬೆಲೆ ಸಿಗದೇ ಇರುವುದರಿಂದ ಸಾಲದ ಹಣವನ್ನು ಮರುಪಾವತಿ ಮಾಡುವುದಕ್ಕೆ ಸಾಧ್ಯವಾಗದೇ ಇರುವುದರಿಂದ ರೈತರ ಆಸ್ತಿಯನ್ನು ಹರಾಜು ಮಾಡತಕ್ಕಂಥ ಪರಿಸ್ಥಿತಿ ಉಂಟಾಗಿದೆ. ನಮ್ಮ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಯವರು ಹಲವು ಹುದ್ದೆಗಳಲ್ಲಿ ಅಧಿಕಾರವನ್ನು ಮಾಡಿ ಸಾಕಷ್ಟು ಅನುಭವವನ್ನು ಕೂಡ ಹೊಂದಿದ್ದಾರೆ. ಆದರೆ ರೈತರ ಬಡ್ಡಿ ಮನ್ನಾ ಮಾಡುತ್ತಾರೆಂದು ಮಾನ್ಯ ವಿರೋಧ ಪಕ್ಷದ ಮುಖಂಡರು ಎಲ್ಲಾ ಸದಸ್ಯರು ಮತ್ತು ಆಡಳಿತ ಪಕ್ಷದ ಸದಸ್ಯರು ಒಂದು ಭಾವನೆಯನ್ನು ಇಟ್ಟುಕೊಂಡಿದ್ದೆವು. ಆದರೆ ಈ ಬಜೆಟ್‌ನ್ನು ನೋಡಿದಾಗ ರೈತರ ವಿರೋಧಿ ಬಜೆಟ್ ಎಂದು ನಾವು ಹೇಳಬೇಕಾಗುತ್ತದೆ. ನಮ್ಮ ಎಲ್ಲಾ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ತೊಡಗಿಸಿದ್ದಾರೆಂದು ಮತ್ತು ಹಿಂದಿನ ಬಜೆಟ್‌ಗೆ ಎಷ್ಟು ಹಣವನ್ನು ತೊಡಗಿಸಿದ್ದಾರೆ ಅದು ಬೇರೆ ವಿಚಾರ. ಬಹಳ ಮುಖ್ಯವಾಗಿ, ನಮ್ಮ ಉತ್ತರ ಕರ್ನಾಟಕದ ಭಾಗದ ಬಗ್ಗೆ ಮಾನ್ಯ ಪಿ.ಹೆಚ್. ಪೂಜಾರ್‌ಯವರು ಹೇಳಿದರು. ನಾವು ಮಾನ್ಯ ಜೆ.ಹೆಚ್. ಪಟೇಲರನ್ನು ಸ್ಮರಿಸಬೇಕಾಗುತ್ತದೆ. ಅವರು ಏಳು ಹೊಸ ಜಿಲ್ಲೆಗಳನ್ನು ಮಾಡಿದರು. ಏನು ಒಂದು ಉದ್ದೇಶದಿಂದ ಹೊಸ ಜಿಲ್ಲೆಗಳನ್ನು ಮಾಡಿದರು, ಆ ಭಾಗದ ಜನರಿಗೆ ನೇರವಾದ ಒಂದು ಆಡಳಿತವನ್ನು ಕೊಡಬೇಕು. ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಬೇಕು ಎನ್ನುವ ಒಂದು ಕನಸನ್ನು ಇಟ್ಟುಕೊಂಡು ಅವರು ಮಾಡಿದರು. ಏಳು ಜಿಲ್ಲೆಗಳನ್ನು ಮಾಡಿದರೂ ಕೂಡ ನಮ್ಮ ಜಿಲ್ಲೆಯ ಒಂದು ಉದಾಹರಣೆ, ಮಾನ್ಯ ಮುಖ್ಯಮಂತ್ರಿಗಳು ನಾಲ್ಕನೇ ತಿಂಗಳಲ್ಲಿ ನಮ್ಮ ಕೊಪ್ಪಳ ಜಿಲ್ಲೆಯ ರಿವ್ಯೂ ಮಾಡಿದರು. ಕಳೆದ ಒಂದು ವರ್ಷದ ಅವಧಿಯಲ್ಲಿ ಕೊಪ್ಪಳ ನಗರಕ್ಕೆ ಕುಡಿಯುವ ನೀರಿನ ಯೋಜನೆಗೆ ಒಂಭತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರು ತರುವ ವ್ಯವಸ್ಥೆಯಾಗಿದೆ.

ಡಿಸ್ಟ್ರಿಬ್ಯೂಷನ್, ಲೈನ್ ಎಸ್ಟಿಮೇಟ್ ಅದರಲ್ಲಿ ಇನ್‌ಕ್ಲೂಡ್ ಆಗಿಲ್ಲ. ಅದನ್ನು ಸಚಿವ ಸಂಪುಟದಲ್ಲಿ ತಂದು ಮಂಜೂರು ಮಾಡಿಸಿ ಕೊಡಬೇಕೆಂದು ಅಂದು ಅವರನ್ನು ಒತ್ತಾಯ ಮಾಡಿದ್ದೆವು, ಇದರ ಬಗ್ಗೆ ನಮ್ಮ ಮಾನ್ಯ ಜಿಲ್ಲಾ ಮಂತ್ರಿಗಳೂ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದರು. ಮಾನ್ಯ ನಗರಾಭಿವೃದ್ಧಿ ಸಚಿವರು ಬಂದಾಗ ಅವರಿಗೆ ಆ ಸ್ಪಾಟಿಗೆ ಕರೆದುಕೊಂಡು ಹೋಗಿ ಆ ಯೋಜನೆಯನ್ನು ತೋರಿಸಿದ್ದೇವೆ. ಆದರೆ ಅದು ಇದುವರೆಗೂ ಕಾರ್ಯಗತವಾಗಿಲ್ಲ. ಕಳೆದ ಸರ್ಕಾರದಲ್ಲಿ ಜಿಲ್ಲಾ ಕ್ರೀಡಾಂಗಣಕ್ಕೆ ಸುಮಾರು 21 ಲಕ್ಷ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದರು. ಜಿಲ್ಲಾಮಟ್ಟದ ಕ್ರೀಡಾಂಗಣ ಅಲ್ಲಿ ನಿರ್ಮಾಣವಾಗಬೇಕಾದರೆ ಆ ಸೈಟ್‌ನ್ನು ಖರೀದಿ ಮಾಡಲು ಹೆಚ್‌ಕೆಡಿಬಿ ಯಲ್ಲಿ ಕೊಡಬೇಕಾದರೂ ಕೂಡ ಆ ನಿಯಮಾವಳಿ ಪ್ರಕಾರ ಕೊಡುವುದಕ್ಕಾಗುತ್ತಿಲ್ಲ. ಮಾನ್ಯ ಜಿಲ್ಲಾ ಮಂತ್ರಿಗಳಿಗೂ ಕೂಡ ನಾವು ಹೇಳಿದ್ದಾಗಿದೆ, ಮಾನ್ಯ ಮುಖ್ಯ ಮಂತ್ರಿಗಳಿಗೂ ಕೂಡ ಆ ಸೈಟ್‌ನ್ನು ಕೊಂಡುಕೊಳ್ಳಲು ಎಂಟು ಎಕರೆ ಜಮೀನಿಗೆ ಹಣವನ್ನು ಕೊಡಿ ಎಂದರೆ ಇನ್ನುವರೆಗೆ ಕೂಡ ಆ ಕೆಲಸವಾಗಿಲ್ಲ. 200 ಬೆಡ್ ಹಾಸ್ಪಿಟಲ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಆರೋಗ್ಯ ಮಂತ್ರಿಗಳು ರಿವ್ಯೂ ಮಾಡಿದ ಸಂದರ್ಭದಲ್ಲಿ ಹೇಳಿದರು. ಕೊಡಲು ತಯಾರಾಗಿದ್ದೇವೆ, ಅಲ್ಲಿ ಜಮೀನಿನ ಕೊರತೆ ಇದೆ ಎಂದು ಹೇಳಿದರು. ಸರ್ಕಾರ ಅಸಮತೋಲನ ನಿವಾರಣೆ ಮಾಡುವ ಉದ್ದೇಶ ಇದೆಯೇ ಅಥವಾ ಇಲ್ಲವೇ ಎನ್ನುವುದನ್ನು ಅವರು ಇಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಮಾನ್ಯ ಕೃಷಿ ಸಚಿವರು ಕೃಷಿಯ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಒಂದು ಆಯೋಗವನ್ನು ರಚನೆ ಮಾಡುತ್ತೇವೆ. ವೈಜ್ಞಾನಿಕವಾದ ಒಂದು ಬೆಲೆಯನ್ನು ಸೂಚಿಸತಕ್ಕಂಥದ್ದು ಇರಬಹುದು, ಬೆಲೆಯನ್ನು ಶಿಫಾರಸ್ಸು ಮಾಡುವುದಾಗಿರಬಹುದು, ಇದು ಉತ್ತಮವಾದ ಕೆಲಸವಾಗಿರುವುದರಿಂದ ಇದನ್ನು ನಾವು ಸ್ವಾಗತ ಮಾಡುತ್ತೇವೆ. ಅದಕ್ಕೆ ಬಹಳಷ್ಟು ಒತ್ತು ಕೊಡುವ ಕೆಲಸ ಕೂಡ ಆಗಬೇಕಾಗಿದೆ. ಅವರು ಬಿಟಿ ಹತ್ತಿ ತಳಿಯ ಬಗ್ಗೆ ಹೇಳಬೇಕಾಗುತ್ತದೆ. ಅವರು ಪ್ರಾಯೋಗಿಕವಾಗಿ ರೈತರಿಗೆ ಕೊಡುತ್ತಾರೋ ಅಥವಾ ಬೀಜವನ್ನು ಹಂಚುತ್ತಾರೊ ಎನ್ನುವುದನ್ನು ಹೇಳಬೇಕಾಗುತ್ತದೆ. ಇನ್ನು ತೋಟಗಾರಿಕೆ ಬಗ್ಗೆ ಹೇಳಬೇಕೆಂದರೆ, ಇವತ್ತು ನಾವು ಹಣ್ಣು ಮತ್ತು ತರಕಾರಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಮೊದಲನೆಯ ಸ್ಥಾನದಲ್ಲಿದ್ದೇವೆ. ಕಳೆದ ಸಾಲಿನ ಆಕ್ಷನ್ ಮತ್ತು ಟೇಕನ್ ರಿಪೋರ್ಟ್ ನೋಡಿದರೆ ಏನೇನು ಕೆಲಸವಾಗಿಲ್ಲ. ಇವರು ಹಲವಾರು ಕಡೆ ಶೈತ್ಯಾಗಾರಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ. ಬಿಜಾಪುರ, ಬಾಗಲಕೋಟೆ ಮತ್ತು ಕೊಪ್ಪಳ, ಕೋಲಾರ ಹಾವೇರಿ ಇಂತಹ ಕಡೆ ಹೆಚ್ಚು ಒತ್ತು ಕೊಡುವ ಕೆಲಸ ಇವತ್ತು ಆಗಬೇಕಾಗಿದೆ. ನಾವು ಇವತ್ತು ಕಾಂಪಿಟೇಷನ್ ಯುಗದಲ್ಲಿದ್ದೇವೆ. ಬೇರೆ ಬೇರೆ ರೀತಿಯ ಬೆಳೆಗಳಿಗೆ ಇವತ್ತು ಬೆಲೆ ಸಿಗುತ್ತಿಲ್ಲ. ಇವತ್ತು ಹಣ್ಣು ಮತ್ತು ತೋಟಗಾರಿಕೆಯ ಬೆಳೆಗಳನ್ನು ಬೆಳೆಯುವುದಕ್ಕೆ ನಮಗೆ ಅವಕಾಶವಿದೆ. ಅದರ ಬಗ್ಗೆ ತಾವು ಇನ್ನು ಹೆಚ್ಚು ಒತ್ತು ಕೊಡುವ ಕೆಲಸವಾಗಬೇಕಾಗಿದೆ. ಇವತ್ತು ಸೈಂಟಿಸ್ಟ್‌ಗಳು ಏನಿದ್ದಾರೆ, ಅವರು ತೋಟಗಾರಿಕೆ ಮತ್ತು ಕೃಷಿ ಇಲಾಖೆಯ ಒಂದು ಅಧೀನದಲ್ಲಿ ಇಲ್ಲ, ಅವರು ಪ್ರೈವೇಟೈಸ್ ಕಂಪನಿಗಳಲ್ಲಿದ್ದಾರೆ. ಸರ್ಕಾರದ ವತಿಯಿಂದ ಅವರಿಗೆ ನಾವು ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಪ್ರೈವೇಟ್‌ದಲ್ಲಿ ಅವರಿಗೆ ತಿಂಗಳಿಗೆ 30-40 ಸಾವಿರ ಹಣವನ್ನು ಕೊಡುತ್ತಿದ್ದಾರೆ. ತಳಿಗಳನ್ನು ನೀವು ರೀಸರ್ಚ್ ಮಾಡಿ ಬಿಡದಿದ್ದರೆ, ಇವತ್ತು ರೈತನು ಉದ್ಧಾರವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಒಂದು ಚಿಂತನೆಯನ್ನು ಸರ್ಕಾರ

ಮಾಡಬೇಕಾಗುತ್ತದೆ. ಕಳೆದ ಸಾಲಿನ ಬಜೆಟ್‌ನಲ್ಲಿ ಎರಡು ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಮಾಡಿ ಕೊಡುತ್ತೇವೆಂದು ಹೇಳಿದ್ದರು. ಇವತ್ತು 1.2 ಲಕ್ಷ ಹೆಕ್ಟೇರ್ ಮಾತ್ರ ಕಾರ್ಯಗತ ಮಾಡಿದ್ದಾರೆ. ಇದು ಇನ್ನು ತೀವ್ರಗತಿಯಲ್ಲಿ ಆಗಬೇಕಾಗುತ್ತದೆ. ನೀರಾವರಿ, ಆರೋಗ್ಯ ಮತ್ತು ಶಿಕ್ಷಣ ಇದಕ್ಕೆ ನಾವು ಹೆಚ್ಚು ಒತ್ತನ್ನು ಕೊಟ್ಟರೆ ನಾವು ಮುಂದಿನ ಜನರಾಂಗವನ್ನು ಎತ್ತರಕ್ಕೆ ಒಯ್ಯಲು ನಮಗೆ ಸಾಧ್ಯವಿದೆ. ಇನ್ನು (ಬಿ) ಸ್ಕೀಂ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದ ಪಾಲಿನ ನೀರನ್ನು ಮಾನ್ಯ ಕಾಗೋಡು ತಿಮ್ಮಪ್ಪನವರೇ ಮತ್ತು ಕಾನೂನು ಮಂತ್ರಿಗಳೇ ಏನು ಪ್ರೋಗ್ರಾಂ ಮಾಡಿದ್ದೀರಿ; ಈ ಬಜೆಟ್‌ನಲ್ಲಿ ನೀವು ಏನನ್ನೂ ತೋರಿಸಿರುವುದಿಲ್ಲ. ನಮ್ಮ ಭಾಗದ ಕೊಪ್ಪಳ, ಯಲಬುರ್ಗಾ, ಕುಷ್ಟಗಿ ಈ ಪ್ರದೇಶ ಒಣಪ್ರದೇಶವಾಗಿದೆ. ಇವತ್ತು ಸಿಂಗಟಾಲೂರು ಪ್ರಾಜೆಕ್ಟ್‌ನಿಂದ 40 ಸಾವಿರ ಎಕರೆಯ ಜಮೀನಿಗೆ ನೀರನ್ನು ಗನಗ ಜಿಲ್ಲೆಗೆ ಒಯ್ಯುವ ಕೆಲಸವನ್ನು ಶ್ರೀ ಜೆಚ್.ಕೆ. ಪಾಟೀಲರವರು ಮಾಡಿರುವುದರಿಂದ ನಾವು ಅವರನ್ನು ಸ್ವಾಗತ ಮಾಡುತ್ತೇವೆ. ಅವರೂ ಕೂಡ ನಮ್ಮ ರೈತರು. ನಮ್ಮ ಆದ್ಯತೆ ಕೂಡ, ಹಿಂದೆ 1990 ರಲ್ಲಿ ಪ್ರಾಜೆಕ್ಟ್ ಆಗತಕ್ಕಂಥ ಸಂದರ್ಭದಲ್ಲಿ ಕೊಪ್ಪಳ ಜಿಲ್ಲೆಯ ಸುಮಾರು 34 ಹಳ್ಳಿಗಳು ರೀಹ್ಯಾಬಿಲಿಟೇಷನ್ ಆಗಿರುತ್ತವೆ. ನಮ್ಮ ರೈತರು ಆಗ ತ್ಯಾಗಮಾಡಿದ್ದಾರೆ. ಮೂರು ಮೀಡಿಯಮ್ ಸ್ಕೀಂ ಗಳನ್ನು ಕಳೆದ ಒಂದುವರೆ ವರ್ಷದಿಂದ ಕೇಳುತ್ತಿದ್ದೇವೆ, ಇನ್ನುವರೆಗೆ ಆ ಪ್ರೋಗ್ರಾಮ್ ಫಿಕ್ಸ್ ಆಗುತ್ತಿಲ್ಲ. ಎಷ್ಟು ಟಿಎಂಸಿ ನೀರನ್ನು ಕೊಡುತ್ತೇವೆ, ಮತ್ತು ಆ ಸ್ಕೀಂನ್ನು ಸೇರಿಸುತ್ತೇವೆ ಎನ್ನುವ ಚಿಂತನೆ ಕೂಡ ಇವತ್ತು ಬರುತ್ತಿಲ್ಲ. ಹೀಗಾದರೆ ನೀವು ಆ ಪ್ರಾದೇಶಿಕ ಅಸಮತೋಲನವನ್ನು ಹೇಗೆ ನಿವಾರಣೆ ಮಾಡುತ್ತೀರಿ. ನೀವು ಒಂದು ಕಡೆ ಹೇಳಿದಿರಿ, 7-8 ಜಿಲ್ಲೆಗಳಲ್ಲಿ ಇವತ್ತು ಶಿಕ್ಷಣ ಮಟ್ಟ ಕುಸಿದಿದೆ ಎಂದು ಹೇಳಿದಿರಿ, ಅದನ್ನು ಎತ್ತರಿಸಬೇಕಾದರೆ ನೀವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ನಾವು ಡಿಗ್ರಿ ಕಾಲೇಜುಗಳನ್ನು ಕೇಳಿದ್ದೇವೆ, ಲಾ ಕಾಲೇಜುಗಳನ್ನು ಕೇಳಿದ್ದೇವೆ, ಇನ್ನು ನಾವು ವೈದ್ಯಕೀಯ ಕಾಲೇಜುಗಳನ್ನು ಕೇಳುತ್ತಿದ್ದೇವೆ, ಅಲ್ಲಿ ಅಪ್ಲಿಕೇಷನ್ ಬಂದಿಲ್ಲ ಅದಕ್ಕಾಗಿ ನಾವು ಕೊಟ್ಟಿಲ್ಲವೆಂದು ಹೇಳುತ್ತಾರೆ. ಅಲ್ಲಿ ಅಪ್ಲಿಕೇಷನ್ ಬಂದಿಲ್ಲವೆಂದರೆ, ಅಲ್ಲಿಯ ವಿದ್ಯಾಭ್ಯಾಸದ ಗುಣಮಟ್ಟವನ್ನು ನೀವು ಎತ್ತರಿಸುತ್ತಿರೋ ಇಲ್ಲವೆ? ಇವೆಲ್ಲಾ ಚಿಂತನೆಗಳನ್ನು ನೀವು ಮಾಡಬೇಕಾಗುತ್ತದೆ. ಪ್ರವಾಸೋದ್ಯಮದ ಬಗ್ಗೆ ಇವತ್ತು ನಾವು ಸ್ವಾಗತವನ್ನು ಮಾಡುತ್ತೇವೆ. ಅದಕ್ಕೆ ಬಹಳಷ್ಟು ಹಣವನ್ನು ಇವತ್ತು ತೊಡಗಿಸಿದ್ದಾರೆ. ಮಾನ್ಯ ಮಂತ್ರಿಗಳು ಹೆಚ್ಚಿನ ಒತ್ತು ಕೊಡುವ ಕೆಲಸವನ್ನು ಮಾಡಿದ್ದಾರೆ. ಇವತ್ತು ನಾವು ಸಂಪನ್ಮೂಲವನ್ನು ಗುರುತಿಸಬೇಕಾಗಿದೆ. ನಾವು ಥೈಲೆಂಡ್‌ಗೆ ಹೋದ ಸಂದರ್ಭದಲ್ಲಿ ನೋಡಿದ್ದೇವೆ. ಪ್ರವಾಸಿಗರು ಬರುವುದರಿಂದ ಏನು ಟ್ಯಾಕ್ಸ್ ಸಂಗ್ರಹವಾಗುತ್ತದೆ. ಅದರಿಂದ ಇವತ್ತು ಯಾವರು ಎಷ್ಟೋ ಇಂಪ್ರೂವ್ ಆಗಿದ್ದಾರೆ, ಅದಕ್ಕಾಗಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತನ್ನು ಸರ್ಕಾರ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಚಾನುವಾರುಗಳ ಬಗ್ಗೆ ಕೂಡ ನಾವು ಮಹತ್ವವನ್ನು ಕೊಡಬೇಕಾಗಿದೆ. ಮಾನ್ಯ ಪಶುಸಂಗೋಪನಾ ಮಂತ್ರಿಗಳು ಹೇಳಿದ್ದಾರೆ. ಸುಮಾರು 20 ಜಿಲ್ಲೆಗಳಲ್ಲಿ ತಪಾಸಣೆ ಕೇಂದ್ರಗಳನ್ನು ಮಾಡಿ, ಅವರು ಇವತ್ತು ಕೆಲಸವನ್ನು ಮಾಡಬೇಕಾಗಿದೆ. ಏಕೆಂದರೆ, ಇವತ್ತು ನಾವು ಸಾವಯವ ಕೃಷಿಗೆ ಹೋಗಬೇಕಾಗಿದೆ. ಪೆಸ್ಟಿಸೈಡ್ ಹೊಡೆದಾಗ ಫುಡ್ ಪಾಯಿಜನ್ ಆಗುತ್ತದೆಂದು ಎಕ್ಸ್‌ಪೋರ್ಟ್ ಆಗತಕ್ಕಂಥ ನಮ್ಮ ಮಾಲನ್ನು ಪರದೇಶಗಳಲ್ಲಿ ಕೊಂಡುಕೊಳ್ಳುತ್ತಿಲ್ಲ. ಕಾರಣ, ನಾವು ಆ ಹಿಂದಿನ ಕೃಷಿಗೆ ಇವತ್ತು ಹೋಗಬೇಕಾಗಿದೆ. ಅದಕ್ಕಾಗಿ ಆ ಒಂದು ಕೆಲಸವನ್ನು

ನಾವು ಇವತ್ತು ತೀವ್ರಗತಿಯಲ್ಲಿ ಮಾಡಬೇಕಾಗಿದೆ. ಇಂಡಸ್ಟ್ರೀಯಲ್‌ಗಳ ಬಗ್ಗೆ ಇವತ್ತು ಹೇಳಬೇಕಾದರೆ, ನೀವು ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚುತ್ತೇವೆಂದು ಹೇಳಿದ್ದೀರಿ. ನೀವು ಕಾರ್ಮಿಕರ ಬಗ್ಗೆ ಕೂಡ ಚಿಂತನೆಯನ್ನು ಮಾಡಬೇಕಾಗುತ್ತದೆ. ಇವತ್ತು ಉದ್ದಿಮೆಗಳನ್ನು ಮುಚ್ಚುವುದರಿಂದ ಎನ್‌ಎ ಆದ ಆ ಜಮೀನಿನ ಉತ್ಪಾದನೆ ಕೂಡ ನಿಲ್ಲುತ್ತದೆ, ಮತ್ತು ಉದ್ದಿಮೆ ಕೂಡ ನಿಂತಾಗ, ಆ ಕಾರ್ಮಿಕರ ಚಿಂತನೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಸಣ್ಣ ನೀರಾವರಿ ಯೋಜನೆ ಬಗ್ಗೆ, ಕಳೆದ ಸಾಲಿನಲ್ಲಿ ಕೂಡ ಇವರು ಹೇಳಿದ್ದಾರೆ, 25 ಕೆರೆಗಳನ್ನು ಪುನಶ್ಚೇತನ ಮಾಡುತ್ತೇವೆಂದು ಹೇಳಿದ್ದಾರೆ. ಒಂದು ಸಾವಿರ ಕೋಟಿ ರೂಪಾಯಿಗಳ ವಿದೇಶಿ ನೆರೆಯನ್ನು ಪಡೆದುಕೊಳ್ಳುತ್ತೇವೆ. ಇವತ್ತು ಅದು ಆಗಬೇಕು. ಕೆರೆಗಳ ಹೂಳನ್ನು ತೆಗೆದು, ಆ ಕೆರೆಗಳ ಪುನಶ್ಚೇತನ ಮಾಡಿದಾಗ ನಮ್ಮ ರೈತರಿಗೆ ಒಂದು ಉತ್ತೇಜನ ಕೊಟ್ಟಂತಾಗುತ್ತದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕುಡಿಯುವ ನೀರಿನ ವಿಚಾರದಲ್ಲಿ, ಪ್ರಜಾತಂತ್ರದ ಮೊದಲನೆ ಪಂತದಲ್ಲಿ ಒಂದು ಒಳ್ಳೆಯ ಕೆಲಸವನ್ನು ಇವತ್ತು ಮಾಡಿದ್ದಾರೆ. ಸುಮಾರು ಎರಡುವರೆ ಲಕ್ಷ ಹಣ ಇರುವುದನ್ನು ಮೂರುವರೆ ಲಕ್ಷ ರೂಪಾಯಿಗಳನ್ನು ಕೊಡತಕ್ಕಂಥದ್ದನ್ನು ಮಾಡಿ, ಅವರಿಗೆ ಕೆಲವು ಅಧಿಕಾರವನ್ನು ಕೊಟ್ಟಿದ್ದಾರೆ. ಸ್ಕೂಲ್ ಕಟ್ಟಡ ನಿರ್ವಹಣೆ ಇರಬಹುದು, ಅಂಗನವಾಡಿ ಕಟ್ಟಡ ಇರಬಹುದು, ಟ್ಯಾಕ್ಸ್ ಹಾಕುವಂಥದ್ದು ಇದು ಬಹಳ ಉತ್ತಮವಾದ ಕೆಲಸ, ಈ ಕೆಲಸದ ಬಗ್ಗೆ ನಾವು ಈ ಸರ್ಕಾರವನ್ನು ಸ್ವಾಗತ ಮಾಡುತ್ತೇವೆ. ಒಟ್ಟಾರೆ ರೈತರ ವಿರೋಧಿ ಬಜೆಟ್ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಮಾಡಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಅಧ್ಯಕ್ಷರೆ, ಅಂತೂ ಇಂತೂ ಅತ್ತು ಕರೆದು ಔತಣ ಮಾಡಿದ ಹಾಗೆ, ಈ ಬಜೆಟ್‌ನಲ್ಲಿ ಬಹಳ ಕಷ್ಟಪಟ್ಟು ಮಾತನಾಡುವುದಕ್ಕೆ ಒಂದು ಅವಕಾಶ ಸಿಕ್ಕಿದೆ. ಆದರೆ 10-15 ನಿಮಿಷದಲ್ಲಿ ಮಾತನಾಡಬೇಕೆಂದರೆ ಹೇಗೆ? ಹೊಸದಾಗಿ ಆರಿಸಿ ಬಂದ ಶಾಸಕರಿಗೆ ಒಂದು ಅವಕಾಶ ಸಿಗದಿದ್ದರೆ ನೀವು ಆ ಶಾಸಕರಿಗೆ ಯಾವ ರೀತಿಯಾಗಿ ತರಬೇತಿ ಕೊಡುತ್ತೀರಿ, ನಿಮ್ಮ ಅಣ್ಣ-ತಮ್ಮಂದಿರನ್ನು ನೀವು ಯಾವ ರೀತಿಯಾಗಿ ತರಬೇತಿ ಕೊಡುತ್ತೀರಿ ಎನ್ನುವ ಬಗ್ಗೆ ನಮಗೆ ಸಂಶಯ ಬಂದಿದೆ. ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುವುದರ ಜೊತೆಗೆ ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ. 2001-2002ನೇ ಸಾಲಿಗೆ ಕಾಂಗ್ರೆಸ್ ಸರ್ಕಾರ ಒಂದು ಬಜೆಟನ್ನು ಇವತ್ತು ಮಂಡಿಸಿದೆ. ಇದು ಬಹಳ ನಿರಾಶಾದಾಯಕವಾದ ಒಂದು ಬಜೆಟ್ ಆಗಿದೆ, ರೈತರ ವಿರೋಧಿ ಬಜೆಟ್, ರೈತ ಕಾರ್ಮಿಕರ ವಿರೋಧಿ ಬಜೆಟ್, ಎಲ್ಲಾ ಕಾರ್ಮಿಕರ, ಹಿಂದುಳಿದ ವರ್ಗದವರ, ಅಲ್ಪಸಂಖ್ಯಾಂತರ ಹಾಗೂ ಎಲ್ಲಾ ಸಾಮಾನ್ಯ ವರ್ಗದವರ ಒಂದು ವಿರೋಧಿ ಬಜೆಟ್ ಆಗಿದೆ. ಜನಸಾಮಾನ್ಯರು ಬಜೆಟ್‌ನಿಂದ ಏನು ನಿರೀಕ್ಷಣೆಯನ್ನು ಇಟ್ಟುಕೊಂಡಿದ್ದರೋ ಅದು ಇವತ್ತು ಸುಳ್ಳಾಗಿದೆ. ಹಾಗೂ ಹುಸಿಯಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು 23,000 ಕೋಟಿ ರೂಪಾಯಿಗಳ ಒಂದು ಆದಾಯದಲ್ಲಿ 23,276 ಕೋಟಿ ರೂಪಾಯಿಗಳ ಖರ್ಚು, ಸುಮಾರು 43 ಕೋಟಿ ರೂಪಾಯಿಗಳ ಒಂದು ಕೊರತೆ ಇರತಕ್ಕಂಥ ಬಜೆಟ್‌ನಲ್ಲಿ, ಇದರಲ್ಲಿ ಲಯಾಬಿಲಿಟಿ ಎಷ್ಟು ಇನೆ ಎಂದರೆ, ಕೇಂದ್ರ ಸರ್ಕಾರದ 11,875 ಕೋಟಿ ರೂಪಾಯಿಗಳು, ಓಪನ್ ಮಾರ್ಕೆಟ್

ಲೋನ್ 5279 ಕೋಟಿ ರೂಪಾಯಿಗಳು ಎಲ್‌ಐಸಿ ಮತ್ತು ನಬಾರ್ಡ್ ಹಾಗೂ ಇನ್ನಿತರ ಸಂಸ್ಥೆಗಳಿಗೆ 4,849 ಕೋಟಿ ರೂಪಾಯಿಗಳು ಇದೆ.

10.40 ಪಿ.ಎಂ.

ಸುಮಾರು 21,954 ಕೋಟಿ ರೂಪಾಯಿಗಳ ಸಾಲಗಾರರಾಗಿರುವಂತಹ ಈ ಒಂದು ಬಜೆಟ್‌ಆಗಿದೆ. ಈ ಒಂದು ಬಜೆಟ್‌ನಲ್ಲಿ ಸುಧಾರಣೆ ಎನ್ನುವುದೇ ಇಲ್ಲವಾಗಿದೆ, ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅಬ್ಯಾರಿ ತೆರಿಗೆಯಿಂದ ಸುಮಾರು 1227 ಕೋಟಿ ರೂಪಾಯಿಗಳು ಬಾಕಿ ಇದೆ, ಅಬ್ಯಾರಿ ಬಡ್ಡಿ 150 ಕೋಟಿ ರೂಪಾಯಿಗಳಿದ್ದು ಅದನ್ನು ಮನ್ನಾ ಮಾಡಿದ್ದರೂ ಇನ್ನು 28 ಕೋಟಿ ರೂಪಾಯಿಗಳಷ್ಟು ಹಣ ಬಾಕಿ ಇದೆ. ಮೋಟಾರು ವಾಹನಗಳಿಂದ 55 ಕೋಟಿ ರೂಪಾಯಿಗಳು ಬಾಕಿ ಇದೆ, ಸ್ಟಾಂಪ್ ಮತ್ತು ರಿಜಿಸ್ಟ್ರೇಷನ್ ಮತ್ತು ವಗೈರೆಗಳಿಂದ 156 ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದೆ. ಕೋಕೋ ಕೋಲಾ ಮತ್ತು ಇತರೆ ಕಂಪನಿಗಳಿಂದ ಸುಮಾರು 140 ರಿಂದ 150 ಕೋಟಿ ರೂಪಾಯಿಗಳನ್ನು ಬಡ್ಡಿ ಮನ್ನಾವಾಗಿ ಮಾಡಿದ್ದಾರೆ. ಇವತ್ತು ನಮ್ಮ ಸಮಾಜದಲ್ಲಿರತಕ್ಕಂತಹ ಕೃಷಿಕರು ಕಣ್ಣಿನಲ್ಲಿ ನೀರು ಬಿಡುವಂತಹ ವ್ಯವಸ್ಥೆಯಲ್ಲಿದ್ದಾರೆ. ಅಂತಹ ಒಂದು ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರವಿದ್ದರೂ ಕೂಡ ಮೊದಲು ರೈತರಿಗೆ ಆದ್ಯತೆಯನ್ನು ಕೊಡುವಂಥದ್ದು ಕರ್ತವ್ಯವಾಗಿದೆ. ಈ ಸರ್ಕಾರ ರೈತರ ಬಗ್ಗೆ ಮಲತಾಯಿ ಧೋರಣೆಯನ್ನು ತೋರಿಸಿದೆ. ಬರೀ ರೈತರ ಪರವಾಗಿ ಇದ್ದೇವೆಂದು ಹೇಳುತ್ತಿದ್ದಾರೆ. ಆದರೆ ನೀತಿಯಲ್ಲಿ ನೋಡಿದಾಗ ಹೈಟೆಕ್, ಡಾಟ್‌ಕಾಂ, ಪಾರದರ್ಶಕ ಮತ್ತು ಸಿಲಿಕಾನ್ ಸಾಫ್ಟ್‌ವೇರ್ ಕಂಪ್ಯೂಟರ್ ಈ ಮಾತುಗಳನ್ನು ನಮ್ಮ ಮುಖ್ಯಮಂತ್ರಿಗಳು ಹೆಚ್ಚಾಗಿ ಮಾತನಾಡುತ್ತಾರೆಯೇ ವಿನಃ ರೈತರ ಬಗ್ಗೆ ಅವರಿಗೆ ಏನು ಸಂಕಷ್ಟವಿದೆ, ಅವರ ಕರ್ತವ್ಯವೇನು? ಅವರಿಗೆ ಸರಿಯಾದಂತಹ ಬೆಲೆ ಸಿಗುತ್ತಿದೆಯೇ ವಿದ್ಯುಚ್ಛಕ್ತಿ ಸಿಗುತ್ತಿದೆಯೇ ಎನ್ನುವ ಕಡೆಗೆ ಹೆಚ್ಚಿನ ಒಂದು ಒತ್ತನ್ನು ಕೊಟ್ಟಿದ್ದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಜನಸಾಮಾನ್ಯರು ಈ ಬಜೆಟ್‌ನ್ನು ಮೆಚ್ಚುತ್ತಿದ್ದರು, ಎಂದು ನನಗಂತೂ ಭಾವನೆ ಇದೆ. ಇವತ್ತು ಕೃಷಿಕರು ಬೆಳೆದ ಮುಸುಕಿನ ಜೋಳದ ಬಗ್ಗೆ ಹೇಳುವುದಾದರೆ ಇವತ್ತು ನಮ್ಮ ತಾಲ್ಲೂಕಿನಲ್ಲಿ ಸುಮಾರು 4 ಲಕ್ಷ ಕ್ವಿಂಟಾಲ್ ಮುಸುಕಿನ ಜೋಳವನ್ನು ಬೆಳೆದರೂ ಕೂಡ, ಇವತ್ತು 30 ಸಾವಿರ ಕ್ವಿಂಟಾಲ್ ಮುಸುಕಿನ ಜೋಳವನ್ನು ಖರೀದಿ ಮಾಡಿದ್ದಾರೆ, ಕಳೆದ 15 ದಿವಸಗಳಿಂದ ಒಂದು ಕ್ವಿಂಟಾಲ್ ಮುಸುಕಿನ ಜೋಳವನ್ನು ತೆಗೆದುಕೊಂಡಿಲ್ಲ. ಕೇಂದ್ರ ಸರ್ಕಾರದಿಂದ ಹಣ ಬಂದಿದೆ ಎಂದು ತಾವು ಹೇಳುತ್ತೀರಿ, ಎಫ್‌ಸಿಐನವರಿಗೆ ಆದೇಶವನ್ನು ಕೊಟ್ಟಿದ್ದೀರಿ ಎಂದು ಹೇಳುತ್ತೀರಿ, ಆದರೂ ಕೆಲಸವಾಗುತ್ತಿಲ್ಲ. ಸರ್ಕಾರ ಇದರ ಬಗ್ಗೆ ಸ್ವಲ್ಪ ಚಿಂತನೆಯನ್ನು ಮಾಡಬೇಕು. ಇವತ್ತು ಪಿರಿಯಾಪಟ್ಟಣದಲ್ಲಿ 10-15 ದಿವಸದಿಂದ ಒಂದು ಕ್ವಿಂಟಾಲ್ ಜೋಳವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ, ಸರ್ಕಾರ ಇದರ ಬಗ್ಗೆ ಏತಕ್ಕಾಗಿ ಕಾಳಜಿಯನ್ನು ತೆಗೆದುಕೊಂಡಿಲ್ಲ? ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ, ಸುಮ್ಮನೆ ನಾವು ಬರೀ ಕೇಂದ್ರ ಸರ್ಕಾರದ ಬಗ್ಗೆ ಹೇಳಬಹುದು, ಕೇಂದ್ರದವರು ರಾಜ್ಯಸರ್ಕಾರದ ಬಗ್ಗೆ ಹೇಳುವುದರಿಂದ ಏನೂ ಪ್ರಯೋಜನವಿಲ್ಲ. It is the fundamental duty of the State to safeguard the interests of all the farmers and the citizens of this state. ಮುಸುಕಿನ ಜೋಳದ ಬಗ್ಗೆ ಹೇಳಿದ ನಂತರ ವಿ.ಎಫ್.ಸಿ.

ಹೊಗೆಸೊಪ್ಪಿನ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ವಿಎಫ್‌ಸಿ ಹೊಗೆಸೊಪ್ಪು ನಮ್ಮ ರಾಜ್ಯದಲ್ಲಿ ಬಹಳ ಒಂದು ಉತ್ಕೃಷ್ಟವಾದಂತಹ ಬೆಳೆಯಾಗಿದೆ, ಇದು ಕಮರ್ಷಿಯಲ್ ಕ್ರಾಪ್ ಆಗಿದ್ದರೂ ಕೂಡ, ನಮ್ಮ ಸರ್ಕಾರ ರೈತರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೃಷಿಸಚಿವರು ಕಳೆದ ವರ್ಷ ರೈತರ ಬೆಂಗಾವಲಾಗಿ ನಿಂತು ನಮ್ಮ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದರು, ರೈತರ ಪರವಾಗಿ ನಾನು ಸರ್ಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ವರ್ಷ ಅದೇ ರೀತಿಯಲ್ಲಿ ಏನಾಗಿದೆ ಎಂದರೆ ಆಂಧ್ರ ಸರ್ಕಾರದವರು ಇದರ ಬಗ್ಗೆ ಹೈಕೋರ್ಟಿನಲ್ಲಿ ಸ್ಟೇಯನ್ನು ಕೊಟ್ಟಿದ್ದಾರೆ. ಇವತ್ತು ರಾಜ್ಯದ ಪರವಾಗಿ ರಾಜ್ಯದ ಹಿತವನ್ನು ಕಾಪಾಡಲು ಸುಪ್ರಿಂ ಕೋರ್ಟ್‌ಗೆ ರೈತರ ಪರವಾಗಿ ಅಪೀಲು ಹೋಗಬೇಕೆಂದು ಹೇಳಿ ಇದೇ ಸದನದಲ್ಲಿ ನಾವು ಆಗ್ರಹ ಮಾಡಿದಾಗ ಮಾನ್ಯ ಸಚಿವರು ಇದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರು, ಆದರೂ ಕೂಡ ಇದುವರೆವಿಗೂ ಏನು ಕೂಡ ಆಗಿರುವುದಿಲ್ಲ. ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ, ಕೂಡಲೇ ನಾನು ಈ ಸರ್ಕಾರವನ್ನು ಆಗ್ರಹಿಸಿ ಹೊಗೆಸೊಪ್ಪು ಬೆಳೆಗಳನ್ನು ನಿಯಂತ್ರಿಸಬಾರದು ಎನ್ನುವ ದೃಷ್ಟಿಯಿಂದ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಬೇಕೆಂದು ಈ ಸರ್ಕಾರವನ್ನು ನಾನು ಆಗ್ರಹಪಡಿಸುತ್ತೇನೆ. ನನ್ನ ಕ್ಷೇತ್ರದಲ್ಲಿರತಕ್ಕಂಥಹ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಇವತ್ತು ರೈತರು ಹಣ ಸಿಗದೆ ಬಹಳ ಕಷ್ಟಪಡುತ್ತಿದ್ದಾರೆ. ಸರ್ಕಾರ ರೈತರ ಪರವಾಗಿ 6 ಕೋಟಿ ರೂಪಾಯಿಗಳ ಗ್ಯಾರಂಟಿಯನ್ನು ಕೊಟ್ಟಿದ್ದರೂ ಕೂಡ, ಕಳೆದ 3 ತಿಂಗಳಾದರೂ ಕೂಡ ಇನ್ನು 2 ರಿಂದ 3 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಿರುವುದಿಲ್ಲ. ರೈತರ ಪರವಾಗಿ ಸರ್ಕಾರದವರು ಗ್ಯಾರಂಟಿಯಾಗಿ ಆಶ್ವಾಸನೆಯನ್ನು ಕೊಟ್ಟಿದ್ದರೆ ಸಾಲದು ಅದು ಕಾರ್ಯಗತವಾಗುವುದರ ಬಗ್ಗೆ ಒಂದು ಆಶ್ವಾಸನೆಯನ್ನು ಈ ಸದನದಲ್ಲಿ ಕೊಟ್ಟಾಗ 24 ಗಂಟೆಗಳಲ್ಲಿ ಆ ಆಶ್ವಾಸನೆಯನ್ನು ಈಡೇರಿಸತ್ಕಕಂತಹ ಒಂದು ಸಮರ್ಪಕವಾದಂತಹ ಸರ್ಕಾರ ರಚನೆಯಾದರೆ ನಾವು ನಿಜಕ್ಕೂ ಕೂಡ ಶ್ಲಾಘನೆಯನ್ನು ಮಾಡುತ್ತೇನೆ. ಆ ಸಾಮರ್ಥ್ಯವು ಕೂಡ ನಿಮಗೆ ಇದೆ, ಇಲ್ಲಿರತಕ್ಕಂತಹ ಮಂತ್ರಿಗಳು ಸುಮಾರು 30 ರಿಂದ 50 ವರ್ಷಗಳ ಅನುಭವವನ್ನು ಹೊಂದಿರುವಂತಹ ಹಿರಿಯ ಮಂತ್ರಿಗಳಿದ್ದಾರೆ, ಅವರಿಗೆ ಅನುಭವದಲ್ಲಿ ಏನು ಕೊರತೆಯಿರುವುದಿಲ್ಲ, ನನಗೆ ಇದರ ಬಗ್ಗೆ ಒಂದು ಅನುಮಾನ ಬರುತ್ತಿದೆ. ಏತಕ್ಕಾಗಿ ಇವರುಗಳು ಇಷ್ಟು ಮೆತ್ತಗೆ ಇದ್ದಾರೆ? ಏನೋ something is wrong in this Government ಅದನ್ನು ಸರಿಪಡಿಸಿಕೊಂಡು ಎಲ್ಲಾ ರೀತಿಯಲ್ಲಿ ಚುರುಕಾಗಿ ಹೋದರೆ ಮೆಷಿನರಿ ಚುರುಕಾಗುತ್ತದೆ ಎಂಬ ಆಶ್ವಾಸನೆ ಇದೆ, ಆ ದೃಷ್ಟಿಯಿಂದ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯ ಬಗ್ಗೆ ಕೂಡಲೇ ಸರ್ಕಾರದವರು ಗಮನವನ್ನು ಹರಿಸಿ, ಗ್ಯಾರಂಟಿ ಕೊಟ್ಟಿರತಕ್ಕಂತಹ ಹಣವನ್ನು ಸಹಕಾರಿ ಬ್ಯಾಂಕಿನಿಂದ ರೈತರಿಗೆ ಮತ್ತು ಕಾರ್ಮಿಕರಿಗೆ ಕೊಡಿಸುವಂತಹ ಕೆಲಸವನ್ನು ಮಾಡಿ ಅವರ ಹಿತವನ್ನು ಕಾಪಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಎಸ್.ಎಸ್. ಪಾಟೀಲ್‌ರವರು ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಹೇಳುತ್ತಿರುತ್ತಾರೆ. ಇವತ್ತಿನ ಒಂದು ಪರಿಸ್ಥಿತಿಯಲ್ಲಿ ಬೆಲೆಯು ಕುಸಿದಿದೆ, ಸಹಕಾರಿ ಸಂಘಗಳಲ್ಲಿ ಹಣವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ, ರೈತರುಗಳು ಡಿಫಾಲ್ಟರ್ ಆಗಿದ್ದಾರೆ, ಇವತ್ತು ಬಡ್ಡಿಯನ್ನು ಕಟ್ಟುವುದಕ್ಕೆ ಸಾಧ್ಯಾವಾಗದಿರುವಂತಹ ಸ್ಥಿತಿಯಲ್ಲಿದ್ದಾರೆ. ಸರ್ಕಾರದವರು ಅಬ್ಯಾರಿ ಲಾಬಿಗೆ 150 ಕೋಟಿ ರೂಪಾಯಿಗಳನ್ನು ಕೋಕೋ

ಕೋಲಾ ಮತ್ತು ಇತರೆ ಕಂಪನಿಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಮನ್ನಾ ಮಾಡುವಂತಹ ಮತ್ತು ತೆರಿಗೆ ವಿನಾಯಿತಿಯನ್ನು ನೀಡುವಂತಹ ಸಂದರ್ಭದಲ್ಲಿ ರೈತರಿಗೆ ಸುಮಾರು 200 ರಿಂದ 300 ಕೋಟಿ ರೂಪಾಯಿಗಳನ್ನು ಬಡ್ಡಿ ಮನ್ನಾ ಮಾಡುವುದಕ್ಕೆ ನಿತಕ್ಕಾಗಿ ಹಿಂಜರಿಯುತ್ತಿದ್ದೀರಿ, ಎನ್ನುವುದು ನನಗೆ ನಿಜಕ್ಕೂ ಕೂಡ ಅರ್ಥವಾಗುತ್ತಿಲ್ಲ. ಅವರ ಬಗ್ಗೆ ದೃಢಸಂಕಲ್ಪವನ್ನು ಮಾಡಬೇಕು, ರೈತರುಗಳು ನಿಮಗೆ ಮತವನ್ನು ಕೊಟ್ಟು ನಿಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿ ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಅವರನ್ನು ನಾವುಗಳು ಯಾರೂ ಮರೆಯ ಬಾರದು, ಇವತ್ತು ಪಟ್ಟಣಗಳಲ್ಲಿರತಕ್ಕಂಥವರು ಬೇರೆ ಬೇರೆ ಸಾಫ್ಟ್‌ವೇರ್‌ಗಳನ್ನು ಮಾಡ ತಕ್ಕಂಥವರು ಕೇವಲ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿದ್ದಾರೆ, ಆದರೆ ರೈತರು ಮತ್ತು ಕಾರ್ಮಿಕರ ಸಂಖ್ಯೆ ಜಾಸ್ತಿ ಇರುದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಲೂ ಕೂಡ ಮನಸ್ಸು ಮಾಡಿ ಬಡ್ಡಿಯನ್ನು ಮನ್ನಾ ಮಾಡಬೇಕು. ಈಗಿರುವಂತಹ ಸಾಲಕ್ಕೆ ಮರುಪಾವತಿಗೆ ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕು. ಸಹಕಾರ ಬ್ಯಾಂಕುಗಳಿಗೆ ಎರಡು ಪರ್ಸೆಂಟ್ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಸರ್ಕಾರದವರಲ್ಲಿ ಮನವಿ ಮಾಡಿಕೊಂಡಿದೆಯೇ ವಿನಃ It is not an order. The Government has given any order. ಮನವಿ ಮಾಡಿಕೊಂಡು ಅವರು ಲಾಭಾಂಶದಲ್ಲಿ ಕೊಡಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥದ್ದು ನಿಜಕ್ಕೂ ಕೂಡ ನಾನು ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ, ಇದು ಸರಿಯಿಲ್ಲ. ಯಾವುದೇ ಆದರೂ ಕೂಡ ಒಡ್ಡಿ ಪೂರ್ತಿ ಮನ್ನಾ ಮಾಡಬೇಕು, ಮೊಸಳೆ ಕಣ್ಣೀರು ಒರೆಸುವುದರಿಂದ ರೈತರು ತೃಪ್ತಿಯಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ವಿದ್ಯುತ್ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಮೂರು ವರ್ಷಗಳಲ್ಲಿ ಗ್ರಾಹಕರಿಗೆ ಮೀಟರನ್ನು ಅಳವಡಿಸುತ್ತೇವೆಂದು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ವಿದ್ಯುತ್ ವಿತರಣಾ ಖಾಸಗಿಕರಣದ ಜೊತೆ 2001-2002ನೇ ಇಸವಿಯಲ್ಲಿ ವಿದ್ಯುತ್‌ನ್ನು ದಕ್ಷತೆಯಿಂದ ಸುಧಾರಣೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ವಿದ್ಯುತ್ ವಿತರಣೆ ಮತ್ತು ಪ್ರಸಾರಂಗದಲ್ಲಿ ಸುಮಾರು ಶೇಕಡ 38 ಪರ್ಸೆಂಟ್ ವೇಸ್ಟ್ ಆಗುವಂಥದ್ದನ್ನು ತಪ್ಪಿಸಿದರೆ ಈ ಸರ್ಕಾರ ಇವತ್ತು ಇಡೀ ಕರ್ನಾಟಕದಲ್ಲಿರತಕ್ಕಂತಹ ಎಲ್ಲಾ ಭಾಗಗಳಿಗೂ ರೈತರಿಗೆ ಮತ್ತು ಪಟ್ಟಣದವರಿಗೆ ಎಲ್ಲರಿಗೂ ಕೂಡ ನಾವು ವಿದ್ಯುತ್‌ನ್ನು ಕೊಡಬಹುದು. ಆ ದೃಷ್ಟಿಯಲ್ಲಿ ವಿತಕ್ಕಾಗಿ ವಿಫಲವಾಗಿದೆ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ; ಅದನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳುತ್ತೇನೆ. ರೈತರಿಗೆ ಗುಣಮಟ್ಟದ ಕರೆಂಟ್‌ನ್ನು ಒದಗಿಸಬೇಕೆಂದು ನಾವು ಕೇಳಿಕೊಂಡಾಗ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 8 ಗಂಟೆಯವರಿಗೆ ವಿದ್ಯುತ್‌ನ್ನು ಕೊಡುತ್ತೇವೆಂದು ಬಹಳ ಧಾರಾಳವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ನಾವು ಚಿರಋಣಿಗಳಾಗಿದ್ದೇವೆ, ಏಕೆಂದರೆ ರಾತ್ರಿ ಹೊತ್ತು ವಿದ್ಯುತ್ ಬರುತ್ತಿಲ್ಲ, ರಾತ್ರಿಹೊತ್ತಿನಲ್ಲಿ ಗಂಟೆಗೆ ಒಂದೆರಡು ಸಲ ಕರೆಂಟ್ ಹೋಗುತ್ತಿರುತ್ತದೆ. ಹಳ್ಳಿಗಳಲ್ಲಿ ರಾತ್ರಿಯ ಹೊತ್ತಿನಲ್ಲಿ ಜಮೀನಿಗೆ ಹೋಗಬೇಕಾದರೆ ಹಾವುಗಳು ಇರುತ್ತದೆ, ಬಹಳ ಕಷ್ಟವೆಂದು ಹೇಳಿದ್ದಾರೆ. ರೈತರುಗಳು ಕಷ್ಟಜೀವಿಗಳು ಸಾಯಂಕಾಲ 6 ಗಂಟೆಯಿಂದ ಬೆಳಗಿನ 6 ಗಂಟೆಯವರೆವಿಗೂ ಸತತವಾಗಿ ವಿದ್ಯುತ್‌ನ್ನು ಕೊಡುವುದಾದರೆ ಅದನ್ನು ನಾನು ಸ್ವಾಗತಿಸುತ್ತೇನೆ. ಅದು ಮೇ-1 ರಿಂದ ಜಾರಿಗೆ ಬರಬಾರದು, ಏಪ್ರಿಲ್-1 ರಿಂದ ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ನಿಜವಾಗಿಯೂ ಕೂಡ ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ ಮೇ-1 ರಿಂದ ಬೇಡ, ಏಪ್ರಿಲ್-1 ರಿಂದ ನೀವು ವಿದ್ಯುತ್‌ನ್ನು ಕೊಡಬೇಕೆಂದು ಹೇಳುತ್ತೇನೆ. ಪಟ್ಟಣ ಪ್ರದೇಶಗಳಿಗೆ ಸ್ವಲ್ಪ ವಿದ್ಯುಚ್ಛಕ್ತಿಯನ್ನು ಕಡಿಮೆ ಮಾಡಿದರೆ ಏನಾಗುವುದಿಲ್ಲ, ದೊಡ್ಡ ದೊಡ್ಡ ಕೈಗಾರಿಕೆಗಳು ಒಂದೊಂದು ವಾರ ನಿಂತರೆ ಏನೂ ತೊಂದರೆಯಾಗುವುದಿಲ್ಲ. ಆದರೆ ರೈತನು ಬೆಳೆ ಬೆಳೆಯುವುದು ನಿಂತರೆ ನಾವೆಲ್ಲರೂ ಹೊಟ್ಟೆ ಹಸಿದುಕೊಂಡು ನಿಲ್ಲಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನೀರಾವರಿ ಪಂಪ್‌ಸೆಟ್ಟುಗಳಿಗೆ 650 ಕೋಟಿ ರೂಪಾಯಿಗಳು ಏಪ್ರಿಲ್ 15 ರೊಳಗಾಗಿ ಬಡ್ಡಿಯನ್ನು ಮನ್ನಾ ಮಾಡುವಂತಹ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ ನಾನು ಅದನ್ನು ಸ್ವಾಗತಿಸುತ್ತೇನೆ. ಆದರೆ ಏಪ್ರಿಲ್ ತಿಂಗಳು ಬೇಡ, ಕನಿಷ್ಠಪಕ್ಷ 6 ತಿಂಗಳಾದರೂ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ತತ್ಕಾಲ್ ಯೋಜನೆಯ ಬಗ್ಗೆ ಹೇಳುವುದಾದರೆ ಈ ಯೋಜನೆಯು ನಿಜಕ್ಕೂ ಕೂಡ ಸರಿಯಾಗಿರುವುದಿಲ್ಲ. 25,000 ರೂ.ಗಳನ್ನು ಕಟ್ಟಿದರೆ ತಕ್ಷಣ ವಿದ್ಯುತ್‌ನ್ನು ಕೊಡುವಂತಹ ಯೋಜನೆಯಾಗಿದೆ. ಈ ಅಕ್ರಮ ಸಕ್ರಮದ ಬಗ್ಗೆ ತಾವು ಏನು ಕೊಡುತ್ತಿದ್ದೀರಿ, ಅದೇ ರೀತಿಯಲ್ಲಿ ಅದರೆ ಒಳ್ಳೆಯದು. ಅಕ್ರಮ ಸಕ್ರಮದಲ್ಲಿ 10 ಸಾವಿರ ರೂಪಾಯಿಗೆ ಒಂದೇ ಒಂದು ಕಂಬವಿದ್ದರೆ ಅದಕ್ಕೆ ಕರೆಂಟ್ ಕೊಡುವಂತಹ ವ್ಯವಸ್ಥೆ ಇದೆ. ಆದರೆ ಮಿನಿಮಮ್ 25,000 ರೂಪಾಯಿಗಳನ್ನು ಗ್ರಾಹಕರಿಂದ ಕಟ್ಟಿಸಿಕೊಳ್ಳುವುದು ಬೇಡ, ಇದು ಸರಿಯಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಹೊಸ ಕಾರ್ಯಕ್ರಮದ ಪ್ರಕಾರ ಗ್ರಾಹಕರಿಗೆ ಮಿನಿಮಮ್ 25,000 ರೂಪಾಯಿಗಳನ್ನು ಹಾಕಬೇಡಿ, ಬೇಕಾದರೆ ಅಕ್ರಮ ಸಕ್ರಮದ ಪ್ರಕಾರ ಕೊಡಬೇಕು. ಮಿನಿಮಮ್ 25,000 ರೂಪಾಯಿಗಳನ್ನು ರೈತರುಗಳಿಗೆ ಹಾಕಿದರೆ ತುಂಬಾ ಕಷ್ಟವಾಗುತ್ತದೆಂದು ನಾನು ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಅಬ್ಕಾರಿ ವಿಷಯದಲ್ಲಿ ಬೀರ್ ಮತ್ತು ವೈನ್‌ಗಳನ್ನು ಅಂಗಡಿಗಳಲ್ಲಿ ಮಾರಾಟ ಮಾಡುವುದರಿಂದ ಇದು ನಿಜಕ್ಕೂ ಕೂಡ ಸಮಾಜದಲ್ಲಿ ದುಷ್ಪರಿಣಾಮ ಬೀರುತ್ತದೆ. ಮಹಿಳೆಯರೇ ಹೆಚ್ಚಾಗಿ ದಿನಸಿ ಅಂಗಡಿಗಳಿಗೆ ಹೋಗುತ್ತಾರೆ, ಮಹನೀಯರು ಯಾರೂ ಕೂಡ ಹೋಗುವುದಿಲ್ಲ. ಮಹಿಳೆಯರಿಗೆ ನೀವು ಕುಡಿಯುವುದಕ್ಕೆ ಪ್ರಾರಂಭ ಮಾಡಿ ಎಂದು ಹೇಳಿದರೆ ಈ ಸಮಾಜ ಎಲ್ಲಿ ಉಳಿಯುತ್ತದೆ? ಇವತ್ತು ಏನಾದರೂ ಈ ಸಮಾಜವು ಉಳಿದು ಕೊಂಡಿದ್ದರೆ ಕನಿಷ್ಠ ಮಹಿಳೆಯರ ಮನೆಯಲ್ಲಿ ಕುಡಿಯದೆ, ಸಮಾಜದಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಾ, ಒಳ್ಳೆಯ ನೀತಿಯನ್ನು ಹೇಳುವಂತಹ, ಒಳ್ಳೆಯ ಅಡ್ವೈಸ್ ಸಹಿಗೆ ಕೊಡುತ್ತಿರುವುದರಿಂದ ನಾವು ಇಷ್ಟಾದರೂ ಕೆಲಸವನ್ನು ಮಾಡುತ್ತಿದ್ದೇವೆ. ಆದರೆ ನಾವು ಮಹಿಳೆಯರಿಗೆ ಕುಡಿಯುವುದನ್ನು ಕಲಿಸಿಕೊಡಬೇಕು, ಇವತ್ತು ಬೀರ್ ಮತ್ತು ವೈನ್‌ನ್ನು ಮಾರಾಟ ಮಾಡಿ ಎಂದು ಹೇಳುತ್ತಿದ್ದೀರಿ, ಹಿಂದುಗಡೆ ಒಂದು ಸಣ್ಣ ರೂಮನ್ನು ಮಾಡಿರುತ್ತಾರೆ, ಅಲ್ಲಿ ಹೋಗಿ ಅವರುಗಳು ಕುಡಿದುಕೊಂಡು ಬಂದು ಗಲಾಟೆಯನ್ನು ಮಾಡುತ್ತಾರೆ. ಆದ್ದರಿಂದ ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಸ್ವರ್ಣ ಗ್ರಾಮ ಮತ್ತು ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯ ಬಗ್ಗೆ ಹೇಳುವುದಾದರೆ ಇದು ಒಳ್ಳೆಯ ಒಳ್ಳೆಯ ಯೋಜನೆಗಳಾಗಿವೆ, ಆದರೆ ಅದು ಇದುವರೆವಿಗೂ ಕಾರ್ಯಗತವಾಗಿಲ್ಲ. Momentum has not been created. ದಯಮಾಡಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳು

ಇದರ ಬಗ್ಗೆ ಹೆಚ್ಚಿನ ಒಂದು ಒತ್ತನ್ನು ಕೂಡಲೆ ಅದನ್ನು ಪ್ರಾರಂಭಿಸಬೇಕು. ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಬಗ್ಗೆ ಹೇಳುವುದಾದರೆ, 75 ಕೋಟಿ ರೂಪಾಯಿಗಳನ್ನು ಕೊಟ್ಟಿರುವ ಬಗ್ಗೆ ನಾನು ಸ್ವಾಗತಿಸುತ್ತೇನೆ, ಪ್ರತಿಯೊಬ್ಬ ಶಾಸಕರಿಗೂ 25 ಲಕ್ಷ ರೂಪಾಯಿಗಳನ್ನು ಕೊಟ್ಟಿರತಕ್ಕಂಥದ್ದು ಶ್ಲಾಘನೀಯವಾಗಿದೆ. ಆದರೆ ಅಲ್ಲಿ ಬ್ರಾಕೆಟ್‌ನಲ್ಲಿ ಹಾಕಿರತಕ್ಕದ್ದು, ಹಣ ಉಳಿತಾಯವಾದರೆ ಮಾತ್ರ ಕೊಡಬೇಕು ಎಂದು ಇದೆ. ದಯಮಾಡಿ ಅದನ್ನು ಮಾಡಬೇಡಿ. ಶಾಸಕರಿಗೆ ಕೊಡತಕ್ಕ 25 ಲಕ್ಷ ಏನಿದೆ ಅದನ್ನು 50 ಲಕ್ಷಕ್ಕೆ ಏರಿಸಿ, ಕರ್ನಾಟಕದಲ್ಲಿ ಮೊದಲನೇ ಬಾರಿಗೆ ಕೊಟ್ಟಿದ್ದೀರಿ. ಬೇರೆ ಬೇರೆ ರಾಜ್ಯಗಳಲ್ಲಿ ಕೊಟ್ಟಿದ್ದಾರೆ. ನಮ್ಮಲ್ಲಿ ಮೊದಲನೆಯ ಬಾರಿಗೆ ಕೊಟ್ಟಿದ್ದೀರಿ ಅದಕ್ಕಾಗಿ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. 25 ಲಕ್ಷ ರೂ.ಗಳಾದ 50 ಲಕ್ಷಕ್ಕೆ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ. "ನಮ್ಮ ಹೊಲ ನಮ್ಮ ರಸ್ತೆ" ಯೋಜನೆಯಲ್ಲಿ ನಾವು 40ರಷ್ಟು ಹಣವನ್ನು ಖರ್ಚುಮಾಡಿದರೆ ನಾವು ನಮ್ಮ ಹೊಲಕ್ಕೆ ರಸ್ತೆಯನ್ನು ಮಾಡಿಕೊಳ್ಳಬಹುದು. ಈ ಕಾರ್ಯಕ್ರಮ ಒಳ್ಳೆಯದು ಇದೆ. ರೈತರು 40 ಪರ್ಸೆಂಟ್ ಕೊಡಬೇಕೆಂದು ಏನಿದೆ ಅದನ್ನು 10 ಪರ್ಸೆಂಟ್‌ಗೆ ಇಳಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ನೀರಾವರಿ ಇಲಾಖೆಯನ್ನು ಅಭಿನಂದಿಸಬೇಕಾಗಿದೆ. ಇವತ್ತು ಕಾವೇರಿ ಕಣಿವೆ ಯೋಜನೆಯಲ್ಲಿ 31 ಏತನೀರಾವರಿ ಯೋಜನೆಗಳನ್ನು ಈ ವರ್ಷದಲ್ಲಿ ಪೂರ್ಣಗೊಳಿಸುತ್ತೇವೆನ್ನುವ ದಿಟ್ಟ ನಿಲುವನ್ನು ತೆಗೆದುಕೊಂಡಿರುವುದಕ್ಕೆ ಅಲ್ಲಿನ ರೈತರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಹೆಚ್.ಕೆ. ಪಾಟೀಲರು ನೀರಾವರಿ ಖಾತೆಯನ್ನು ವಹಿಸಿಕೊಂಡ ಮೇಲೆ ಒಳ್ಳೆಯ ಸಮರ್ಥ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆಶ್ವಾಸನೆಗಳನ್ನು ಬಹಳಷ್ಟು ಸರ್ಕಾರ ಕೊಟ್ಟಿದೆ. ಮುಂದಿನ ಮೂರು ವರ್ಷಗಳಲ್ಲಿ ವಿದ್ಯುತ್‌ನ್ನು ಹೆಚ್ಚು ಉತ್ಪಾದನೆ ಮಾಡಿ ರೈತರಿಗೆ ವಿದ್ಯುತ್ತಿನ ಅಭಾವ ಕಡಿಮೆ ಮಾಡಲಾಗುವುದು ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಒಂದು ನಿಮಿಷ ಮಾತ್ರ ಮಾತನಾಡಿ. ತಮಗೆ 10 ನಿಮಿಷ ಅವಕಾಶ ಕೊಟ್ಟಿದ್ದು, ಈಗಾಗಲೇ 15 ನಿಮಿಷ ಮಾತನಾಡಿದ್ದೀರಿ. ಇನ್ನು ಒಂದು ನಿಮಿಷ ಮಾತ್ರ ಮಾತನಾಡಿ.

ಶ್ರೀ ಹೆಚ್.ಸಿ. ಬಸವರಾಜ್ : ಮೆಚ್ಚುವಂತಹದ್ದನ್ನು ಸ್ವಲ್ಪ ಹೇಳಬೇಕಾಗುತ್ತದೆ. ಮೆಚ್ಚುವಂತಹದ್ದನ್ನು ಮೆಚ್ಚಲೇಬೇಕಾಗುತ್ತದೆ. ಖಂಡಿಸುವುದನ್ನು ನಾವು ಖಂಡಿಸಲೇಬೇಕಾಗುತ್ತದೆ. ಭಾಗ್ಯಜ್ಯೋತಿಯನ್ನು ಬಡವರಿಗೆ ಏನು ಕೊಡಲಾಗಿದೆ. ಅದರ ಬಾಬ್ತು ಹಣವನ್ನು ಸರ್ಕಾರ ಭರಿಸುತ್ತೆದೆಂದು ಹೇಳಿದ್ದಾರೆ. ರೈತರ ಪಂಪ್‌ಸೆಟ್‌ಗಳ ಬಾಕಿ 450 ಕೋಟಿ ಅದರಲ್ಲಿ 148 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತೇವೆಂದೂ ಅದು ಏಪ್ರಿಲ್ ತಿಂಗಳಿನಿಂದ ಎಂದು ಹೇಳಿದ್ದಾರೆ. ಅದಕ್ಕೆ ಆರು ತಿಂಗಳು ಟೈಮ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮ ಪಂಚಾಯಿತಿ ಅನುದಾನ ಎರಡು ಏನಿತ್ತು ಅದನ್ನು ಮೂರೂವರೆ ಲಕ್ಷಕ್ಕೆ ಏರಿಸಿ ಒಳ್ಳೆಯ ಕೆಲಸ ಮಾಡಿದ್ದೀರಿ. ಅದನ್ನು ಐದು ಲಕ್ಷಕ್ಕೆ ಏರಿಸಬೇಕೆಂದು ಸಲಹೆ ಕೊಡುತ್ತೇನೆ. 2001-02ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ವಹಿಸಲು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಖಾಸಗಿ ವಲಯದವರನ್ನು ಆಹ್ವಾನಿಸುವ ಯೋಜನೆಯನ್ನು ಆರಂಭಿಸಲು ಉದ್ದೇಶಿಸಿದ್ದೇವೆಂದು ಹೇಳಿದ್ದೀರಿ.

ಅಧ್ಯಕ್ಷರು : ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ. ಸಮಯವಿಲ್ಲ ಕೂಡಿ.

ಶ್ರೀ ಹೆಚ್.ಸಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯ ಸಲ ಬಜೆಟ್ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಐದು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು : ನಿಮಗೆ ಏನಾದರೂ ಬೇಕಾದರೆ ಕ್ಲಾರಿಫಿಕೇಷನ್ ಮುಖಾಂತರ ಕೇಳಿ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ನಾನು ಐದು ನಿಮಿಷ ಮಾತ್ರ ಮಾತನಾಡುತ್ತೇನೆ, ಹೆಚ್ಚು ಮಾತನಾಡುವುದಿಲ್ಲ. ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿಯಲ್ಲಿ ಮಾಡಿರುವುದನ್ನು ನಾನು ವೆಲ್‌ಕಂ ಮಾಡುತ್ತೇನೆ. ಅಷ್ಟಕ್ಕೆ ಅವಕಾಶ ಮಾಡಿಕೊಡಿ. ನಾನು ಒಂದೇ ಒಂದು ನಿಮಿಷದಲ್ಲಿ ಹೇಳುತ್ತೇನೆ. ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ. ನಿನ್ನೆ ರಾತ್ರಿ ನಾನು 8 ಗಂಟೆ 45 ನಿಮಿಷದವರೆಗೆ ಇದ್ದೆ.

ಅಧ್ಯಕ್ಷರು : ಹೈಕೋರ್ಟ್ ಬೆಂಚ್ ಮಾಡಿರುವುದನ್ನು ತಾವು ಸ್ವಾಗತ ಮಾಡಿದ್ದೀರಿ ಆಯಿತಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿ - ಧಾರವಾಡದಲ್ಲಿ ಮಾಡಿರುವುದನ್ನು ನಾನು ಖಂಡಿತವಾಗಿಯೂ ಸ್ವಾಗತಿಸುತ್ತಿದ್ದೇನೆ. ಅದೇ ರೀತಿ ಸುಪ್ರೀಂಕೋರ್ಟ್ ಬೆಂಚನ್ನು ಸೌತ್‌ನಲ್ಲಿ ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠ ಮಾಡುವುದರ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ದಾವಾ ಹಾಕುತ್ತಾರೆ. ಇಲ್ಲಿ ಮಾಡುವುದನ್ನು ಒಪ್ಪಿಕೊಳ್ಳುತ್ತಾರೆ ಯಾವುದು ಸರಿ ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಅಧ್ಯಕ್ಷರೇ, The Consultative Committee of parliament has also decided that there must be a Bench of Supreme Court in the State. ದಯವಿಟ್ಟು ತಾವು ಏನಾದರೂ ಮಾಡಿ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಹೇಳಿದ್ದೀರಿ. ಅನೇಕ ಟ್ಯಾಕ್ಸ್‌ನ್ನು ಎಕ್ಷಮ್‌ಷನ್ ಮಾಡಿದ್ದೀರಿ. ಲಾಯರ್‌ಗಳಿಗೆ ಹಾಕಿರತಕ್ಕ ಟ್ಯಾಕ್ಷನ್ನು ಎಕ್ಷಮ್‌ಷನ್ ಮಾಡಬೇಕು. ಲಾ ಛೇಂಬರ್ ಮಾಡುವ ಬಗ್ಗೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಲಾಯರ್ ಛೇಂಬರ್ ಮಾಡುವ ಬಗ್ಗೆ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಮುಖ್ಯಮಂತ್ರಿಗಳು ತೀರ್ಮಾನ ಮಾಡಿದ್ದರು. ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಎಲೆಕ್ಷನ್ ಕಮಿಷನ್ ಆಫೀಸನ್ನು ಖಾಲಿ ಮಾಡಿಸಿ ಅದನ್ನು ಲಾಯರ್‌ಗಳಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದರು. ತಾವು ವಕೀಲರಾಗಿದ್ದೀರಿ ಅದರ ಬಗ್ಗೆ ಸ್ವಲ್ಪ ಮನಸ್ಸು ಮಾಡಿದರೆ ಆಗುತ್ತದೆ. ಸೀನಿಯರ್ ಸಿಟಿಜನ್ಸ್‌ಗಳಿಗೆ ಬಸ್ ಪಾಸ್ ಕೊಡುವ ಬಗ್ಗೆ ಮುಖ್ಯಮಂತ್ರಿಗಳವರಲ್ಲಿ ಕೇಳಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳು ಅದನ್ನು ಸಾರಿಗೆ ಸಚಿವರಾದ ಸಗೀರ್ ಅಹ್ಮದ್‌ರವರಿಗೆ ಕೊಟ್ಟಿದ್ದಾರೆ. ಅದನ್ನು ಆದಷ್ಟುಬೇಗ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗ ಫ್ಲೈಓವರ್ ಬ್ರಿಡ್ಜ್ ಮಾಡಬೇಕೆಂದು ಮಾಡಿದರು. ಅದರಿಂದ ಒಳ್ಳೆಯದಾಯಿತು. ಆದರೆ ತಮ್ಮ ಕಾಲದಲ್ಲಿ ಮೆಟ್ರೊ ಟ್ರೈನ್ ಸಿಸ್ಟಂ ತರಬೇಕಾಗುತ್ತದೆ. ಕಲ್ಕತ್ತಾದಲ್ಲಿರುವ ಹಾಗೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬೆಂಗಳೂರಿನಲ್ಲಿ ಇನ್ನು ಮುಂದೆ ಏನೂ ಮಾಡುವುದಕ್ಕಾಗುವುದಿಲ್ಲ.

ಬೆಂಗಳೂರಿನಲ್ಲಿ ಶ್ರೀಮಾನ್ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಮೆಟ್ರೊ ಟ್ರೈನ್ ಮಾಡಿದರು ಎಂದು ಜನರು ಮೊಮ್ಮಕ್ಕಳು ತಾತ್ಸಮ್ಮನ್ನು ನೆನಸಿಕೊಳ್ಳುತ್ತಾರೆ, ಶ್ಲಾಘನೆ ಮಾಡುತ್ತಾರೆ. ಆ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಬಹಳ ಮುಖ್ಯವಾದುದೆಂದರೆ ಬೆಂಗಳೂರಿನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಾಳಜಿವಹಿಸಿದ್ದಾರೆ. ಬೆಂಗಳೂರಿಗೆ ಆಲ್‌ಓಂಡ್ ಇಂಡಸ್ಟ್ರಿಯಲಿಸ್ಟ್‌ಗಳು ಬರುತ್ತಿದ್ದಾರೆ. ಆದರೆ ಅವರಿಗೆ ಲ್ಯಾಂಡ್ ಇಲ್ಲ. ಮಾನ್ಯ ಕಂದಾಯ ಮಂತ್ರಿಗಳಾದ ಶ್ರೀಕಂಠಯ್ಯ ಮತ್ತು ವಿಭಾಗಾಧಿಕಾರಿಗಳು ಯಾರ್ಯಾರು ಸರ್ಕಾರಿ ಭೂಮಿ ಮತ್ತು ಅಕ್ವಿಸಿಷನ್ ಆಗಿರತಕ್ಕ ಲ್ಯಾಂಡನ್ನು ಬೋಗಸ್ ರೆಕಾರ್ಡ್ಸ್ ಸೃಷ್ಟಿಮಾಡಿ ಕಬಳಿಸಿದ್ದರು ಅಂತಹ ಲ್ಯಾಂಡನ್ನು ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸ ಮಾಡಿದ್ದಾರೆ. ಅದಕ್ಕೆ ನಿಜವಾಗಲೂ ಶ್ಲಾಘನೆ ಮಾಡುತ್ತಿದ್ದೇನೆ. ವಿಭಾಗಾಧಿಕಾರಿಗಳಾದ ತಿಮ್ಮೇಗೌಡರನ್ನು ಯಾರ್ಯಾರು ಭೂಮಿ ಹೊಡಿದ್ದಾರೆ ಅವರ ಹೆಸರು ಕೊಡಿಯೆಂದು ಕೇಳಿದ್ದೇನೆ. ಅದರಲ್ಲಿ ಯಾರ್ಯಾರು ರಾಜಕಾರಣಿಗಳು ಇದ್ದಾರೆ ಅವರುಗಳ ಹೆಸರನ್ನು ಕೊಡಿಯೆಂದು ಕೇಳಿದ್ದೇನೆ, ಅವರು ಕೊಡುತ್ತೇವೆಂದು ಹೇಳಿದ್ದಾರೆ. ಏನಾದರೂ ಮಾಡಿ ಅದನ್ನು ಖುಲ್ಲಾ ಮಾಡಿಸಿ ಬೆಂಗಳೂರಿನ ಲ್ಯಾಂಡನ್ನು ಕಬಳಿಸುವುದನ್ನು ನಿಲ್ಲಿಸಿ, ಅದನ್ನು ವಾಪಸ್ಸು ತೆಗೆದುಕೊಂಡು ಅನುಕೂಲ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಒಂದೇ ಒಂದು ಎಂದು ಹೇಳಿ ಐದನೆಯದು ಕೇಳುತ್ತಾ ಇದ್ದೀರಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಸಣ್ಣ ಹೋಟೆಲ್ ನಡೆಸುವುದು ಎರಡು ಲಕ್ಷದವರೆಗೆ ವ್ಯವಹಾರ ಮಾಡುವವರಿಗೆ ಟ್ಯಾಕ್ಸ್ ಇಲ್ಲ. ಎರಡು ಲಕ್ಷದ ಮೇಲೆ ಟರ್ನ್‌ಓವರ್ ಮಾಡುವವರಿಗೆ ಟ್ಯಾಕ್ಸ್ ಇದೆ. ಸೇಲ್ಸ್ ಟ್ಯಾಕ್ಸನ್ನು ಸಣ್ಣ ಹೋಟೆಲ್ ನಡೆಸುವವರಿಗೆ ಹಾಕಿದರೆ ಫುಟ್‌ಪಾತ್‌ಗಳಲ್ಲಿ ವ್ಯಾಪಾರ ಮಾಡುವವರಿಗೆ ಇಲ್ಲದ ತೊಂದರೆಗಳನ್ನು ಕೊಡುತ್ತಾರೆ, ಇದರ ಬಗ್ಗೆ ವಿವರಿಸಿ ಮಾಡಬೇಕು. ಬಜೆಟ್ ಬಹಳ ಚೆನ್ನಾಗಿದೆ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಇಷ್ಟಾದರೂ ತಾವು ನಾನು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ತಾವು ಎಲ್ಲರ ಬಗ್ಗೆ ರಿಜಿಡ್ ಆಗಿರುತ್ತೀರಿ. ಆದರೆ ಸುಬ್ಬಾರೆಡ್ಡಿಯವರ ಬಗ್ಗೆ ಕರಗುತ್ತೀರಿ ಅದರ ಸೀಕ್ರೇಟ್ ಏನು?

ಅಧ್ಯಕ್ಷರು : ಅಂತಹದ್ದು ಏನೂ ಇಲ್ಲ. ನೋ ಸೀಕ್ರೇಟ್.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುಬ್ಬಾರೆಡ್ಡಿಯವರು ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಬೆಂಚ್ ಆಗಬಾರದೆಂದು ವಿರೋಧ ಮಾಡಿ, ಈ ಸದನದಲ್ಲಿ ಅಲ್ಲಿ ಹೈಕೋರ್ಟ್ ಬೆಂಚ್ ಮಾಡಿರುವುದನ್ನು ಸ್ವಾಗತ ಮಾಡುತ್ತಿದ್ದಾರೆ ಇದು ಸರಿಯಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಬೆಂಚ್ ಆಗಬೇಕೆಂದು ಗಲಾಟೆಯಾಗುತ್ತಿದ್ದಾಗ ನಾನು ಸುಪ್ರೀಂ ಕೋರ್ಟ್‌ಗೆ ಹೋಗಿದ್ದು. ನನ್ನ ಮನಸ್ಸಿನಲ್ಲಿರುವುದನ್ನು ಸದನದ ಮುಂದೆ ಹೇಳುತ್ತಿದ್ದೇನೆ. ಅದರಲ್ಲೂ ಹೈಕೋರ್ಟ್ ಬೆಂಚ್ ಉತ್ತರ ಕರ್ನಾಟಕದಲ್ಲಿ ಆಗಬೇಕೆಂದು ಅನೇಕ ರೆಸಲ್ಯೂಷನ್‌ಗಳನ್ನು ಮಾಡಿದ್ದೇವೆ. ನಮ್ಮ ಬಾರ್ ಕೌನ್ಸಿಲ್‌ನಲ್ಲಿ, ಬಾರ್ ಅಸೋಸಿಯೇಷನ್‌ನಲ್ಲಿ, ಫೆಡರೇಷನ್‌ನಲ್ಲಿ ಎಲ್ಲಾ ಕಡೆ ರೆಸಲ್ಯೂಷನ್ ಮಾಡಿದ್ದೇವೆ. ನಾನು ಸುಪ್ರೀಂಕೋರ್ಟ್‌ಗೆ ಹೋಗಿದ್ದು ಆದಷ್ಟುಬೇಗ ಹೈಕೋರ್ಟ್ ಬೆಂಚ್ ಆಗಬೇಕೆಂದು, ನಾವು ಏನು ಮಾಡುವುದು, ಅನೇಕ ಕೇಸುಗಳಿಗೆ ಹೋಗುತ್ತೇವೆ. ಒಂದೊಂದು ಸಲ ವಿರುದ್ಧವಾಗುತ್ತದೆ. ಅದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಅವರು ಹೇಳಿರುವ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು ಇವತ್ತು ಆ ಬಗ್ಗೆ ನೀವು ಏನಾದರೂ ಧರಣಿ ಮಾಡಿದರೆ ನಾನೂ ನಿಮ್ಮಜೊತೆ ಕುಳಿತುಕೊಳ್ಳುತ್ತೇನೆ. ಅದಕ್ಕೆ ನಾನು ರೆಡಿಯಾಗಿದ್ದೇನೆ. ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್ ಪೀಠ ಆಗಲೇಬೇಕು.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುಬ್ಬಾರೆಡ್ಡಿಯವರು ಅಲ್ಲಿ ವಕೀಲವೃತ್ತಿ ಮಾಡಿದರು, ಇಲ್ಲಿ ಶಾಸಕ ವೃತ್ತಿ ಮಾಡುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸದಾನಂದಗೌಡರ್, ಸುಬ್ಬಾರೆಡ್ಡಿಯವರು ಹೇಳಿದ್ದು ಸರಿಯೋ ಹೇಗೆ?

(ಅ) 2001-2002ನೇ ಸಾಲಿನ ಆಯುವ್ಯಯದ ಮೇಲಿನ ಚರ್ಚೆಗೆ ಮುಖ್ಯ ಮಂತ್ರಿಗಳಿಂದ ಉತ್ತರ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 2001-2002ರ ಮುಂಗಡಪತ್ರದ ಬಗ್ಗೆ ಸದನದಲ್ಲಿ ಸುದೀರ್ಘ ಚರ್ಚೆ ನಡೆದಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಚರ್ಚೆಯಾಗಿದೆ. ಈ ಚರ್ಚೆಯಲ್ಲಿ ಭಾಗವಹಿಸಿದಂಥ ಎಲ್ಲಾ ಸದಸ್ಯರುಗಳಿಗೆ ನಾನು ಅಭಾರಿಯಾಗಿದ್ದೇನೆ. ಮುಂಗಡಪತ್ರದ ಬಗ್ಗೆ ನಮ್ಮ ಟೀಕಾತ್ಮಕವಾದಂಥ ದೃಷ್ಟಿಯಿಂದ ಮುಂಗಡಪತ್ರದ ಕೊರತೆಗಳ ಬಗ್ಗೆ ಸದನದ ಗಮನ ಸೆಳೆದಿದ್ದಾರೆ ಮತ್ತು ಎಲ್ಲಿ ಯಶಸ್ಸನ್ನು ಅವರು ಕಂಡರೋ ಅದನ್ನು ಮೆಚ್ಚಿದ್ದಾರೆ. ಯಾವ ಒಂದು ಮುಂಗಡಪತ್ರ ಕೂಡ ಕಳೆದ 51 ವರ್ಷಗಳ ತಮ್ಮ ದೇಶದ, ರಾಜ್ಯದ ಇತಿಹಾಸದಲ್ಲಿ ಸಾರ್ವತ್ರಿಕವಾದಂಥ ಶ್ಲಾಘನೆಗೆ ಒಳಾಗಾಗಿಲ್ಲ, ಒಳಗಾಗತಕ್ಕಂಥಾದ್ದು ಸಾಧ್ಯವೂ ಇಲ್ಲ. ಏಕೆಂದರೆ ಪ್ರತಿಯೊಬ್ಬರ ದೃಷ್ಟಿಕೋನ ಕೂಡ ಸಾಕಾರವಷ್ಟು ವೈವಿಧ್ಯತೆಗಳನ್ನು ಒಳಗೊಂಡಿರುತ್ತದೆ. ಆ ಕನ್ನಡಕದ ಮೂಲಕ ಪ್ರತಿಯೊಂದು ಬೆಳವಣಿಗೆಯನ್ನೂ ಕೂಡ ನಾವು ವಿಶ್ಲೇಷಣೆ ಮಾಡುತ್ತೇವೆ. ಪ್ರತಿಯೊಂದು ಬಜೆಟ್‌ನಲ್ಲಿ ಅವರದ್ದೇ ಆದ ಒಂದು ಫಿಲಾಸಫಿ ಇರುತ್ತದೆ. ಕಳೆದ ವರ್ಷದ ಆಯವ್ಯಯ ಮುಂದಿನ ಐದು ವರ್ಷಗಳಲ್ಲಿ ಏನೆಲ್ಲಾ ಮಾಡಬಹುದು ಎನ್ನುವ ಒಂದು ಸಿಂಹಾವಲೋಕನ. ಈ ವರ್ಷದ ಆಯವ್ಯಯ